ಶ್ರೀ

ಯಕ್ಷಗಾನ ಛಂದಸ್ಸು

ಲೇಖಕ ಮತ್ತು ಪ್ರಕಾಶಕ:

ಕ. ಪು. ಸೀತಾರಾಮ ಕೆದಿಲಾಯ

ಪೋಸ್ಟು: ಶಿಶಿಲ

ಬೆಳ್ತಂಗಡಿ ತಾಲೂಕು. ದ. ಕ.

★

ಬೆಲೆ: ಮೂರು ರೂಪಾಯಿ.

ಯಕ್ಷಗಾನ ಛಂದಸ್ಸು

ಪ್ರಥಮ ಭಾಗ

ಲೇಖಕ ಮತ್ತು ಪ್ರಕಾಶಕ :

ಕ. ಪು. ಸೀತಾರಾಮ ಕೆದಿಲಾಯ

ಶಿಶಿಲ ಪೋಸ್ಟು

ಬೆಳ್ತಂಗಡಿ ತಾಲೂಕು ದ. ಕ.

1964

ಬೆಲೆ: [illegible]

ಮುನ್ನುಡಿ

ಕನ್ನಡದ ಯಕ್ಷಗಾನ ಪ್ರಬಂಧಗಳಲ್ಲಿ ವಿವಿಧ ಜಾತಿಯ ಪದ್ಯಗಳಿವೆ. ಅವುಗಳಲ್ಲಿ ಮುಖ್ಯವಾದ ಕೆಲವು ಪದ್ಯಗಳ ಸಾಮಾನ್ಯ ಛಂದೋಲಕ್ಷಣವನ್ನು ಈ ಪುಸ್ತಕದಲ್ಲಿ ವಿವೇಚಿಸಿದೆ. ಇದರಲ್ಲಿ ವಿವರಿಸಿದ ಹಾಡುಗಳ ಛಂದೋನಿಯಮವು ಸಪ್ರಾಮಾಣಿಕವೆಂದು ಹೇಳುವಂತಿಲ್ಲ. ಯಕ್ಷಗಾನದ ಕೆಲವು ಹಾಡುಗಳನ್ನು ವಿವಿಧ ರಾಗಗಳಲ್ಲಿಯೂ, ವಿವಿಧ ತಾಳಗಳಲ್ಲಿಯೂ ಹಾಡಬಹುದು. ಆದುದರಿಂದ ರಾಗ-ತಾಳಗಳನ್ನು ನಿರೂಪಿಸಿ, ಎಲ್ಲಾ ಪದ್ಯಗಳಿಗೂ ನಿರ್ದಿಷ್ಟ ಲಕ್ಷಣವನ್ನು ನಿರ್ದೇಶಿಸಲು ಸಾಧ್ಯವಿಲ್ಲ. ಇದರಲ್ಲಿ ಉದಾಹರಿಸಿದ ಪದ್ಯಗಳಿಗೆ ಅವುಗಳ ಆಕರಗಳಾಗಿರುವ ಯಕ್ಷಗಾನ ಪ್ರಬಂಧಗಳಲ್ಲಿ ಸೂಚಿಸಿದ ರಾಗ ತಾಳಗಳನ್ನೇ ಬರೆದಿದೆ. ಷಟ್ಪದಿಗಳ ದ್ವಿಪದಿಯ ತ್ರಿಪದಿಯ ಕಂದದ ಮತ್ತು ಪ್ರಸಿದ್ಧ ವರ್ಣ ವೃತ್ತಗಳ ಛಂದೋಲಕ್ಷಣವನ್ನು ಸೂಚಿಸುವಾಗ ಪೂರ್ವ ಕಾವ್ಯಗಳಿಂದ ದೃಷ್ಟಾಂತಗಳನ್ನು ತೋರಿಸಿದೆ.

ಈ ಪುಸ್ತಕದಲ್ಲಿ ಸೂಚಿಸಿದ ಪದ್ಯಗಳಲ್ಲದೆ, ಇನ್ನೂ ಅನೇಕ ವಿಧದ ಹಾಡುಗಳು ಯಕ್ಷಗಾನ ಪ್ರಬಂಧಗಳಲ್ಲಿ ಕಂಡುಬರುವುವು. ಅವುಗಳ ಲಕ್ಷಣವನ್ನು ಮುಂದಿನ "ಯಕ್ಷಗಾನ ಛಂದಸ್ಸು, ದ್ವಿತೀಯ ಭಾಗ"ದಲ್ಲಿ ಸೂಚಿಸಬೇಕೆಂಬ ಅಭಿಪ್ರಾಯವಿದೆ.

ಈ ಪುಸ್ತಕವನ್ನು ಅಂದವಾಗಿ ಮುದ್ರಿಸಿಕೊಟ್ಟ ಆದರ್ಶ ಮುದ್ರಣಾಲಯದ ಒಡೆಯರಿಗೆ ಬಹಳ ಕೃತಜ್ಞನಾಗಿರುತ್ತೇನೆ.

ಶಿಶಿಲ
1-8-1964

ಕೆ. ಪು. ಸೀತಾರಾಮ ಕೆದಿಲಾಯ.

D. S. Karki,
M.A., Ph.D.

Shri Kadasiddheshwar College
Hubli.

26-8-1964

ಶ್ರೀ ಸೀತಾರಾಮ ಕೆದಿಲಾಯ ಅವರಿಗೆ ವಂದನೆಗಳು . . .

ನೀವು ವಿಶ್ವಾಸದಿಂದ ಕಳುಹಿದ ನಿಮ್ಮ 'ಯಕ್ಷಗಾನ ಛಂದಸ್ಸು' ಎಂಬ ಪುಸ್ತಕದ ಪುಟಗಳು ಮುಟ್ಟಿವೆ. ಪುಸ್ತಕವನ್ನು ಪರಿಶೀಲಿಸಲು ವಿಲಂಬವಾಯಿತು. ಆದುದರಿಂದ ನಿಮಗೆ ಬರೆಯಲು ತಡವಾಗಿದೆ.

ನಮ್ಮ ಯಕ್ಷಗಾನಗಳು ಛಂದಸ್ಸಿಗೆ ತಮ್ಮದೇ ಆದ ಕಾಣಿಕೆಯನ್ನು ನೀಡಿವೆ. ಯಕ್ಷಗಾನದಲ್ಲಿ ಬರುವ ಪದ್ಯಗಳ ಛಂದಸನ್ನು ನಿಮ್ಮ ಪುಸ್ತಕದಲ್ಲಿ ನೀವು ಚೆನ್ನಾಗಿ ಪರಿಶೀಲಿಸಿದ್ದೀರಿ. ಆ ಛಂದಸ್ಸನ್ನು ಅರಿಯಲು ಸುಲಭವಾಗುವಂತೆ, ಮೊದಲಲ್ಲಿ ಛಂದಸ್ಸಿನ ಕೆಲವು ಸಂಗತಿಗಳನ್ನು ಸ್ಪಷ್ಟ ಮಾಡಿದ್ದು ತುಂಬಾ ಅನುಕೂಲವಾಗಿದೆ. ಗುರು, ಲಘು, ಶಿಥಿಲದ್ವಿತ್ವ, ಮಾತ್ರಾಗಣ, ಅಂಶಗಣಗಳ ಟಿಪ್ಪಣಿಗಳನ್ನು ಮೊದಲು ಕೊಟ್ಟುದು ಅಭ್ಯಾಸಕ್ಕೆ ನೆರವಾಗುತ್ತದೆ.

ಯಕ್ಷಗಾನದ ಛಂದಸ್ಸು ಪ್ರಾಮುಖ್ಯವಾಗಿ ಹಾಡುಗಳ ಛಂದಸ್ಸು. ಆದುದರಿಂದ ಆ ಛಂದಸ್ಸಿನ ಪ್ರಸ್ತಾರದ ಸಂದರ್ಭಲ್ಲಿ ರಾಗಗಳ ಹೆಸರುಗಳನ್ನು ಕೊಟ್ಟುದು ಸಮಂಜಸವಾಗಿದೆ. ರಾಗ ಛಂದಸ್ಸುಗಳ ಸಂಬಂಧ ತಿಳಿದಾಗ ಛಂದಸ್ಸಿನ ವಿಚಾರ ಹೆಚ್ಚು ಅರ್ಥವತ್ತಾಗುತ್ತದೆ. ಆದುದರಿಂದ ಈ ದಿಕ್ಕಿನಲ್ಲಿ ನಿಮ್ಮ ಗಮನ ಹರಿದುದು ತುಂಬಾ ಯೋಗ್ಯ. ಸಾಹಿತ್ಯದ ಕಾರ್ಯವನ್ನು ಒಳ್ಳೆಯ ಆಸಕ್ತಿ ವಹಿಸಿ ಮುಂದುವರಿಸುತ್ತಿರುವ ನಿಮಗೆ ಅಭಿನಂದನೆಗಳು.

ಯಕ್ಷಗಾನದ ಸಂಪ್ರದಾಯ ನಿಮ್ಮ ಭಾಗದಲ್ಲಿ ಬೆಳೆದುಬಂದಿದ್ದು ಆ ಸಂಪ್ರದಾಯದಲ್ಲಿ ನೀವು ಬೆಳೆದದ್ದರಿಂದ ಈ ಸಂಬಂಧದ ನಿಮ್ಮ ಪುಸ್ತಕ ಯಕ್ಷಗಾನ ಛಂದಸ್ಸಿಗೆ ಒಂದು ಬೆಲೆಯುಳ್ಳ ಕಾಣಿಕೆಯಾಗಿ ಪರಿಣಮಿಸಬಹುದೆಂದು ಆಶಿಸಿದ್ದೇನೆ.

ವಂದನೆಗಳು

ನಿಮ್ಮ

ಡಿ. ಎಸ್. ಕರ್ಕಿ.

ಕೆ. ಶಂಕರನಾರಾಯಣ ಶಾಸ್ತ್ರಿ.
ಪೊಳಲಿ.

ಮಂಗಳೂರು
19-8-1964

ಶ್ರೀಮಾನ್ ಕೆ. ಪಿ. ಸೀತಾರಾಮ ಕೆದಿಲಾಯ, ಶಿಶಿಲ, ಇವರ ಪರಿಚಯವು ನನಗೆ ಇತ್ತೀಚೆಗೆ ಐದಾರು ತಿಂಗಳ ಹಿಂದೆಯೇ ಉಂಟಾದುದು. ಶ್ರೀಯುತರು ತನ್ನ ವಿದ್ಯಾಭ್ಯಾಸ ಕಾಲದಲ್ಲಿ ಶಾಲೆಯಲ್ಲಿ ಕಲಿತ ಕನ್ನಡದ ಅನುಭವವನ್ನು ಅಲ್ಲಿಯೇ ಬಿಟ್ಟಿರದೆ, ಆ ಮಾರ್ಗದಲ್ಲಿಯೇ ವ್ಯಯಸಾಯ ಮಾಡುತ್ತಾ ಮುಂದುವರಿದಿರುವರು. ಇದಲ್ಲದೆ ಕವಿತೆಗೆ ಮೂಲಕಾರಣವಾದ ಪ್ರತಿಭೆಯೂ ಇವರಿಗೆ ಸ್ವಾಭಾವಿಕವಾಗಿದೆ. ಈ ಕಾರಣಗಳಿಂದ ಕವಿತೆಯೆಂಬುದು ಇವರಿಗೆ ಸರಸವಾಗಿಬಿಟ್ಟಿದೆ. ಇವರು ಬರೆದ ನೂರು ನೀತಿ ಕಂದಗಳಿಂದೊಡಗೂಡಿದ "ಸೂಕ್ತಿ ಮಂಜರಿ" ಎಂಬ ಚಿಕ್ಕ ಪುಸ್ತಕವು ಇವರ ಕವಿತಾಶಕ್ತಿಗೆ ಪ್ರತೀಕವಾಗಿದೆ.

ಯಕ್ಷಗಾಗ ಪ್ರಸಂಗಗಳಲ್ಲಿಯೂ ಇವರ ವ್ಯವಸಾಯವು ಸ್ತುತ್ಯರ್ಹವಾಗಿದೆ. ಇವರು ಬರೆದ "ದುರ್ಯೋಧನ ವಧೆ" ಪ್ರಸಂಗವನ್ನು ನಾನು ನೋಡಿದ್ದೇನೆ. ಹಳೆಯ ಯಕ್ಷಗಾನ ಗ್ರಂಥಗಳಂತೆ, ಆದ್ಯಂತ ಪ್ರಾಸಗಳಿಂದ ಕೂಡಿದ್ದು, ಲಲಿತ ನಿರರ್ಗಳ ಪದ ರಚನೆಯಿಂದ ಸುಂದರವಾಗಿದೆ. ತಕ್ಕಂತೆ ಕಥಾ ಸನ್ನಿವೇಶವೂ ಅಳವಡಿಸಿಕೊಳ್ಳಲ್ಪಟ್ಟಿದೆ.

ಪ್ರಕೃತ ಇವರು "ಯಕ್ಷಗಾನ ಛಂದಸ್ಸು" ಎಂಬ ಲಕ್ಷಣ ಗ್ರಂಥವೊಂದನ್ನು ಬರೆದಿರುವರು. ಇದನ್ನು ನಾನು ಆಮೂಲಾಗ್ರವಾಗಿ ನೋಡಿದೆನು. ಗ್ರಂಥವು ಉಪಯುಕ್ತವಾಗಿದೆ; ಮತ್ತು ಅಪೂರ್ವವಾಗಿದೆ. ಯಕ್ಷಗಾನ ಪ್ರಸಂಗ ರಚನೆಯ ಮಾರ್ಗದಲ್ಲಿ ಪ್ರವೇಶಿಸುವವರಿಗೆ ಇದು ಒಂದು ಕೈದೀವಿಗೆಯಾಗಿದೆ; ತಾವು ಬರೆಯತೊಡಗಿದ ಪ್ರಸಂಗದಲ್ಲಿ ರಸಭಾವಗಳ ಸನ್ನಿವೇಶಕ್ಕೆ ತಕ್ಕಂತೆ ವಿವಿಧ ರಾಗ ತಾಳಗಳ ಪದ್ಯಗಳ ರೀತಿಯನ್ನು ಬೇರೆ ಬೇರೆ ಪ್ರಸಂಗಗಳಿಂದ ಹುಡುಕಿ ಆಯ್ದು ಅನುಭವ ಮಾಡಿಕೊಳ್ಳುವ ಪ್ರಯಾಸವು ಈ ಪುಸ್ತಕದ ಅನುಭವದಿಂದ ದೂರವಾಗುವುದು. ಕನ್ನಡದಲ್ಲಿ ಪ್ರಸಿದ್ಧಗಳಾದ ಆರು ಷಟ್ಪದಿಗಳು, ಆರು ವರ್ಣವೃತ್ತಗಳು, ಕಂದ, ದ್ವಿಪದಿ, ತ್ರಿಪದಿ-ಇವುಗಳ ಲಕ್ಷಣ ಪ್ರಸ್ತಾರ ಉದಾಹರಣೆ ಮುಂತಾದುವುಗಳನ್ನು ಈ ಗ್ರಂಥದ ಆದಿ ಭಾಗದಲ್ಲಿ ನಿರೂಪಿಸಿರುವುದರಿಂದ ಇವುಗಳ

ಅನುಭವಕ್ಕಾಗಿ ಬೇರೆ ಛಂದೋ ಗ್ರಂಥವನ್ನು ಶರಣುಹೊಂದುವ ಆವಶ್ಯಕತೆಯೂ ಇರಲಾರದು.

ಈ ಗ್ರಂಥದಲ್ಲಿ ಮಾತ್ರಾಗಣದ ಹಾಡುಗಳು, ಅಂಶಗಣದ ಹಾಡುಗಳು ಮತ್ತು ಮಿಶ್ರಗಣದ ಹಾಡುಗಳು ಎಂಬ ಮೂರು ವಿಭಾಗಗಳನ್ನು ಮಾಡಿರುವರು. ಅವುಗಳಿಗೆ ಸಂಬಂಧಿಸಿದ ಉದಾಹರಣ ಪದ್ಯಗಳನ್ನು ಹಿಂದಿನ ಪ್ರಸಂಗಗಳಿಂದಲೇ ಆರಿಸಿಕೊಂಡಿರುವರು. ಮಾತ್ರಾಗಣಗಳ ಮಾತ್ರಾಸಂಖ್ಯೆ ಅಂಶಗಣಗಳ ನಾಮನಿರ್ದೇಶ ಮತ್ತು ಆವಶ್ಯಕಗಳಾದ ಇನ್ನಿತರ ಸೂಚನೆಗಳನ್ನು ಸಹಾ ಆಯಾ ಸನ್ನಿವೇಶಗಳಲ್ಲಿಯೇ ಕ್ರಮಬದ್ಧವಾಗಿ ನಿರೂಪಿಸಿರುವರು. ಈ ಕಾರಣದಿಂದ ಓದುವವರಿಗೆ ವಿಷಯಗ್ರಹಣ ಮಾಡಲು ಬಹಳ ಸುಲಭವಾಗಿದೆ.

ಯಕ್ಷಗಾನ ಪ್ರಸಂಗದ ರಚನೆಯ ಕುರಿತಾಗಿ ಹೊಸ ಶೋಧನೆಗೆ ತೊಡಗುವವರಿಗೆ ಈ ಗ್ರಂಥವು ಸ್ಫೂರ್ತಿದಾಯಕವಾಗಿಯೂ, ಪೂರ್ವರಂಗವಾಗಿಯೂ ಇದೆ. ಯಕ್ಷಗಾನ ಕವಿತೆಯ ಲಕ್ಷಣಗಳ ಸಿದ್ಧಾಂತವು ಹೆಚ್ಚಿನ ವಿಮರ್ಶೆಯ ಮೂಲಕ ಮತ್ತು ಪ್ರಾಚೀನ ಗ್ರಂಥಗಳ ಮೂಲಕ ಸರಿಯಾಗಿ ಪ್ರಕಟವಾಗುವ ವರೆಗೆ ಈ ಗ್ರಂಥವು ಯಥಾಶಕ್ತಿ ಜನತೆಗೆ ಉಪಕರಿಸೀತೆಂದು ನನ್ನ ನಂಬುಗೆ. ಇಂತಹ ಲಕ್ಷಣ ಗ್ರಂಥ ರಚನೆಯಲ್ಲಿ ಲೇಖಕರ ಸಾಹಸವು ಶ್ಲಾಘನೀಯವಿದೆ.

ಯಕ್ಷಗಾನ ಛಂದೋ ಲಕ್ಷಣವನ್ನು ನಿರೂಪಿಸುವ ಒಂದು ಗ್ರಂಥವಿದೆ. ಅದರ ಕೆಲವು ಲಕ್ಷ್ಯ ಲಕ್ಷಣ ಸಂಗ್ರಹ ರೂಪಗಳಾದ ಪದ್ಯಗಳನ್ನು ನಾನು ನೋಡಿರುವೆನು. ಆ ಗ್ರಂಥವನ್ನು ಮಾತ್ರ ನೋಡಿಲ್ಲ. ಪ್ರಾಚೀನವಾದ ಯಕ್ಷಗಾನ ಕಲೆಗೆ ಆಧಾರವಾಗಿ ಬರೆದ ಈ ಯಕ್ಷಗಾನ ಛಂದೋ ಗ್ರಂಥವು ಆವಶ್ಯವಾಗಿಯೂ ಈಗ ಬೇಕಾಗಿದೆ. ಅದರ ಅನ್ವೇಷಣೆಯಲ್ಲಿ ಪ್ರಯತ್ನಿಸುವುದು ಯಕ್ಷಗಾನಾಭಿಮಾನಿಗಳ ಮುಖ್ಯ ಕರ್ತವ್ಯವಾಗಿದೆ. ಯಕ್ಷಗಾನ ಕಲಾದೇವಿಯ ಕೋಶದಲ್ಲಿ ಎಂತೆಂತಹ ರತ್ನಗಳು ಅಡಗಿವೆಯೋ? ಯಾರು ಬಲ್ಲರು? ಅವುಗಳೆಲ್ಲ ಹೊರ ಬಂದು ಜನೋಪಯೋಗವಾಗುವಂತೆ ಹೆಚ್ಚಿನ ವ್ಯವಸಾಯಮಾಡಲು ಶ್ರೀ ಕೆದಿಲಾಯರಿಗೂ ಇನ್ನಿತರ ತರುಣರಿಗೂ ಶ್ರೀ ವಾಗ್ದೇವಿಯು ಅನುಗ್ರಹಿಸಲೆಂದು ಹಾರೈಸುತ್ತೇನೆ.

|| ಇತಿ ಶಂ. ||

ಕೊಳಂಬೆ ಪುಟ್ಟಣ್ಣ ಗೌಡ,
ಚೊಕ್ಕಾಡಿ.

ಸುಳ್ಯ
೧೪-೯-೧೯೬೪

ಶ್ರೀಮಾನ್ ಸೀತಾರಾಮ ಕೆದಿಲಾಯರವರ "ಯಕ್ಷಗಾನ ಛಂದಸ್ಸಿ"ನ ಹೊತ್ತಗೆಯನ್ನು ಮೊದಲಿಂದ ತುದಿಯ ವರೆಗೂ ಓದಿ ಮೆಚ್ಚಿದ್ದೇನೆ. ಶ್ರೀಯುತರು ಬರೆದ ಅಚ್ಚಾದ ಹಾಗೂ ಅಚ್ಚಾಗದ ಲೇಖನಗಳನ್ನೂ, ಪುಸ್ತಕಗಳನ್ನೂ ಓದಿದ್ದೇನೆ. ಎಲ್ಲೆಡೆಯಲ್ಲಿಯೂ ಆಳಕ್ಕಿಳಿದು ಹೆಕ್ಕಿದ ಹರಳುಗಳನ್ನು ಒರೆದು ನೋಡುವ ಒಂದು ಒಳನೋಟ ಇವರಲ್ಲಿರುವಂತೆ ಕಾಣುತ್ತದೆ. ಎಲ್ಲಾ ಬರೆಹಗಳಲ್ಲಿಯೂ ತಾನೇ ಕಂಡ ಕೆಲವು ಗುಟ್ಟುಗಳನ್ನು ಎತ್ತಿ ತೋರಿಸುತ್ತಿದ್ದಾರೆ. ಈ ಬಗೆಯ ಬರೆಹಗಳು ತಾಯ್ನುಡಿಯ ಏಳಿಗೆಗಾಗಿ ಬೇಕೇ ಬೇಕು.

"ಯಕ್ಷಗಾನ ಛಂದಸ್ಸು" ಒಂದು ಹೊಸ ಬಗೆಯದು. "ಛಂದಮ ನೋದದೋದಿದವರೋದುಗಳೇ ನೆರೆ ಹಾಸ್ಯಂ ಲೋಕದೊಳ್" ಎಂದೊಬ್ಬ ಕವಿ ಹೇಳಿದ ಮಾತು ಬೆಲೆಯುಳ್ಳದ್ದು. ತಿಳಿದವರ ಕೈಗೂಸಾಗಿ ಬೆಳೆಯುತ್ತಿರುವ ಯಕ್ಷಗಾನ ಕಲೆಯಲ್ಲಿ ಹಾಡಿಗೆ ಮೊದಲ ಮಣೆಯಿದೆ. ಆದರೆ, ಆ ಹಾಡುಗಳನ್ನು ಕಲಿಸುವವರೂ ಕಲಿಯುವವರೂ ಬೆರಳೆಣಿಕೆಗೂ ಸಿಗದಂತೆ ಕಡಿಮೆಯಾಗಿರುವರು. ತಾವೇ ಕಲಿಯುವವರಿಗೆ ಬೇಕಾದ ಕೈಕಂಬದಂತಹ ಬರೆಹಗಳಿಲ್ಲ. ಈ ಕೊರತೆಯನ್ನು ಹೋಗಲಾಡಿಸುವ ಗುರಿಯಿಂದ ಈ ಹೊತ್ತಗೆಯನ್ನು ಎತ್ತಿ ಹೊಗಳಬೇಕು.

ಯಕ್ಷಗಾನದ ಹಾಡುಗಳೆಲ್ಲ ಹೆಚ್ಚಾಗಿ ಮಾತ್ರಾಗಣಗಳನ್ನೇ ಒಳಗೊಂಡಿವೆ ಎಂದು ಹೆಚ್ಚಿನವರು ತಿಳಿದುಕೊಂಡಂತೆ ತೋರುತ್ತದೆ. ಆದರೆ ಆ ಹಾಡುಗಳಲ್ಲಿ ಮಾತ್ರಾಗಣ ಅಂಶೀಗಣಗಳನ್ನೊಳಗೊಂಡ ಹಾಡುಗಳು ಇವೆಯೆಂದು ಆಯ್ದು ಬರೆದು ತೋರಿಸಿ ಅವುಗಳ ಕಟ್ಟಳೆಯನ್ನು ಬರೆದುದು ತಿಳಿಯಬೇಕೆನ್ನುವವರಿಗೆ ಇಲ್ಲವೆ ಕಲಿಯಬೇಕೆನ್ನುವವರಿಗೆ ಕೈಸೊಡರಾಗಿ ನೆರವೀಯಬಹುದು. ಹಿಂದಣ ಪ್ರಸಂಗಗಳ ಕೆಲವು ಹಾಡುಗಳು ತಾಳಕ್ಕೆ ಹೊಂದುವುದಿಲ್ಲವೆಂದು ಕೆಲವರು ಹೇಳುವುದನ್ನು ನಾನು ಕೇಳಿದ್ದೇನೆ. ಇದು ಮೇಲೆ ಬರೆದಂತಿರುವ ಹಾಡುಗಳ ಕಟ್ಟುಗಳ ಗುಟ್ಟುಗಳನ್ನು ಸರಿಯಾಗಿ

ತಿಳಿದುಕೊಳ್ಳುವ ಬೆಳಸಿನಿಂದಲೇ ಆಗಿರಬೇಕೆಂದು ನನಗೆ ತೋರುತ್ತದೆ. ಈ ಬಗೆಯ ಅಡ್ಡದಾರಿಗೆ ತಡೆಯಾಗಿ ಈ ಹೊತ್ತಗೆ ನೆರವೀಯುಬಹುದು.

ಬರೆಹಕ್ಕೆ ಬೆಲೆ ಎಣಿಸುವಾಗ ಬರೆದವನು ಅದಕ್ಕಾಗಿ ಬಳಲಿ ದುಡಿದ ಹೊತ್ತೆನಿತೆಂದು ನೋಡಬೇಕಂತೆ! ಈ ನೋಟದಿಂದಲೂ ಈ ಹೊತ್ತಗೆ ಹೊತ್ತಾರೆ ತೊಡಗಿ ಬಯ್ಗಿನೊಳಗೆ ಮುಗಿದು ಅಚ್ಚಿಗೆ ಹೋದುದಲ್ಲ. ಬರೆಹಕ್ಕಾಗಿ ಶ್ರೀಯುತರು ದಣಿದಿರುವರು. ಆದುದರಿಂದ ಬೆಲೆಯುಳ್ಳದ್ದು; ಓದಲೇ ಬೇಕಾದುದು. ನಾನೊಬ್ಬ ಹಾಡುಗಾರನಲ್ಲ. ಹಾಗಾಗಿ ಇದಕ್ಕಿಂತ ಹೆಚ್ಚು ಬರೆಯುವುದು ನನ್ನೆಣಿಕೆಗೆ ಮೀರಿದ್ದು.

ಯಕ್ಷಗಾನದ ಹಾಡುಗಳ ಕಟ್ಟಳೆಯನ್ನೇ ಗುರಿಯಾಗಿ ಇಟ್ಟುಕೊಂಡು ಬರೆದರೂ, ಇದರಲ್ಲಿ ಹೆಚ್ಚಿನ ಛಂದಸ್ಸಿನ ಹೆಗ್ಗುರುತುಗಳನ್ನೆಲ್ಲ ತೋರಿಸಿ ಕೊಟ್ಟಿರುವುದರಿಂದ ಇದು ಎಳೆಯರನ್ನೂ, ಹಾಡುಗಳನ್ನು ಬರೆಯಬೇಕೆಂದು ಹಂಬಲಿಸುವ ಇತರರನ್ನೂ, ಹಾಡಿಗೆ ಕುಣಿಯುವ ನುಡಿನೆಣ್ಣಿನ ಬಳಮನೆಗೆ ಕರೆದೊಯ್ಯಬಹುದು.

ಕನ್ನಡ ತಾಯಿ ಒಲ್ಮೆದೋರಿ, ಶ್ರೀ ಕೆದಿಲಾಯರ ಬರೆಹದ ಬಳಗ ಬೇಕಾದುದನ್ನು ಪಡೆದು ಹೆಸರು ಗಳಿಸಿ ಮಕ್ಕಳು ಮೊಮ್ಮಕ್ಕಳನ್ನು ಪಡೆದು ಬಾಳುವಂತೆ ಹರಸಲಿ! ಮಲೆನಾಡಿನ ಮೂಲೆಯಲ್ಲಿ ಇದ್ದರೂ, ಬರೆಹದ ಕೋಣೆಯಿಂದ ಎಳೆದೊಯ್ಯುವಂತಹ ತೊಡಕುಗಳ ಬಾಳಿಗೆ ಬೆಸೆದಂತಿದ್ದರೂ ಕನ್ನಡ ನುಡಿಯ ಮೇಲಣ ನಲ್ಮೆಯಿಂದ ಬರೆಯುತ್ತಿರುವ ಶ್ರೀ ಸೀತಾರಾಮ ಕೆದಿಲಾಯರು ನೂರಾರು ಸುಗ್ಗಿಗಳ ಸವಿ ಬೆಲ್ಲಗಳನ್ನುಂಡು ಬರೆದು ಬಾಳಲಿ! ಕನ್ನಡ ನಾಡು ಒಂದಾಗಿ ಒಲ್ಮೆದೋರಲಿ!

ಈ ಪುಸ್ತಕದಲ್ಲಿ ಉದ್ಧರಿಸಿದ ಪದ್ಯಗಳ ಆಕರ ಗ್ರಂಥಗಳು

ಕವಿರಾಜ ಮಾರ್ಗ, ಜಗನ್ನಾಥ ವಿಜಯ, ಪಂಪನ ವಿಕ್ರಮಾರ್ಜುನ ವಿಜಯ, ರನ್ನನ ಸಾಹಸಭೀಮ ವಿಜಯ, ಪೊನ್ನನ ಶಾಂತಿ ಪುರಾಣ, ನಾಗ ವರ್ಮನ ಕಾದಂಬರಿ, ನಾಗಚಂದ್ರನ ರಾಮಚಂದ್ರ ಚರಿತ ಪುರಾಣ, ಚಂದ್ರ ಪ್ರಭ ಪುರಾಣ, ಅನುಭವ ಸಾರ, ಕುಮುದೇಂದು ರಾಮಾಯಣ, ತೊರೆವೆ ರಾಮಾಯಣ, ಕುಮಾರವ್ಯಾಸನ ಗದಗು ಭಾರತ, ಜೈಮಿನಿ ಭಾರತ, ಗಿಳಿವಿಂಡು, ದಾಸರ ಕೀರ್ತನೆ ಇತ್ಯಾದಿ ಕಾವ್ಯಗಳು.

ಕುಮಾರ ವಿಜಯ, ರತ್ನಾವತೀ ಕಲ್ಯಾಣ, ಪುತ್ರಕಾಮೇಷ್ಟಿ, ರಾಮ ಪಟ್ಟಾಭಿಷೇಕ, ಪಂಚವಟಿ ರಾಮಾಯಣ, ಚೂಡಾಮಣಿ, ಸೇತುಬಂಧನ, ಅಂಗದ ಸಂಧಾನ, ಅತಿಕಾಯ ಕಾಳಗ, ಮೈರಾವಣ ಕಾಳಗ, ರಾವಣೋ ದ್ಭವ, ಕಾರ್ತವೀರ್ಯಾರ್ಜುನ ಕಾಳಗ, ಗಿರಿಜಾ ಕಲ್ಯಾಣ, ಶ್ರೀಕೃಷ್ಣ ಬಾಲ ಲೀಲೆ, ರುಕ್ಮಿಣೀ ಸ್ವಯಂವರ, ನರಕಾಸುರ ಕಾಳಗ, ಸುಭದ್ರಾ ಕಲ್ಯಾಣ, ರಾಜಸೂಯಾಧ್ವರ, ಭೀಷ್ಮಾರ್ಜುನ ಕಾಳಗ, ಕರ್ಣಪರ್ವ, ಗದಾಪರ್ವ, ದ್ರೌಪದೀ ಪ್ರತಾಪ, ವಿದ್ಯುನ್ಮತೀ ಕಲ್ಯಾಣ, ಸಭಾಲಕ್ಷಣ ಇತ್ಯಾದಿ ಯಕ್ಷ ಗಾನ ಪ್ರಬಂಧಗಳು.

ಸಹಾಯಕ ಗ್ರಂಥಗಳು

ನಾಗವರ್ಮನ ಛಂದೋಂಬುಧಿ, ಸಂಸ್ಕೃತ ವೃತ್ತ ರತ್ನಾಕರ, ಕನ್ನಡ ಕೈಪಿಡಿ, ಕನ್ನಡ ಛಂದೋವಿಕಾಸ, ಕೇಶಿರಾಜನ ಶಬ್ದಮಣಿ ದರ್ಪಣ- ಇತ್ಯಾದಿ ಗ್ರಂಥಗಳು.

ಅಭಿನಂದನೆ

"ಕನ್ನಡ ಛಂದೋವಿಕಾಸ" ಎಂಬ ಸಂಶೋಧನ ಗ್ರಂಥವನ್ನು ಬರೆದು ಮುಂಬಯಿ ವಿಶ್ವ ವಿದ್ಯಾಲಯದಿಂದ ಪಿ. ಯಚ್. ಡಿ. ಪದವಿಯನ್ನು ಸಂಪಾದಿಸಿದ ಅನೇಕ ಭಾವಗೀತೆ, ಶಿಶುಗೀತೆ, ಪ್ರಬಂಧ ಇತ್ಯಾದಿ ಸಾಹಿತ್ಯವನ್ನು ವಿರಚಿಸಿದ ಕನ್ನಡದ ಶ್ರೇಷ್ಠ ಸಾಹಿತಿಗಳಾದ ಶ್ರೀ ಡಾ। ಡಿ. ಯಸ್. ಕರ್ಕಿ ಅವರೂ, ಯಕ್ಷಗಾನ ಸಾಹಿತ್ಯ ವಿಚಾರವನ್ನು ಚೆನ್ನಾಗಿ ವಿವೇಚಿಸಿ ವಿವರಿಸಬಲ್ಲ ಅದ್ವಿತೀಯ ಅರ್ಥಧಾರಿಯೆನಿಸಿದ ಕನ್ನಡ ಮತ್ತು ಸಂಸ್ಕೃತ ಭಾಷೆಗಳಲ್ಲಿ ವಿದ್ವಾಂಸರಾದ ಶ್ರೀ ಕೆ. ಶಂಕರನಾರಾಯಣ ಶಾಸ್ತ್ರಿ (ಪೊಳಲಿ) ಯವರೂ, ನೂತನ ಕಾವ್ಯ, ಶಿಶುಗೀತೆ, ಯಕ್ಷಗಾನ ಪ್ರಬಂಧಾದಿ ಕೃತಿಗಳನ್ನು ರಚಿಸಿದ ತಿರುಳ್ಗನ್ನಡ ಬರವಣಿಗೆಯಲ್ಲಿ ನಿಷ್ಣಾತರಾದ ಶ್ರೀ ಕೊಳಂಬೆ ಪುಟ್ಟಣ್ಣ ಗೌಡ (ವಿದ್ವಾನ್) ರವರೂ, ತಮ್ಮ ಅಭಿಪ್ರಾಯಗಳನ್ನು ಬರೆದು ಕೊಟ್ಟು ಈ ಪುಸ್ತಕಕ್ಕೆ ಮಹತ್ವವನ್ನು ಒದಗಿಸಿರುವರು. ಅವರಿಗೆ ಬಹಳ ಕೃತಜ್ಞನಾಗಿ ನಮ್ರಭಾವದಿಂದ ವಂದನೆಗಳನ್ನು ಅರ್ಪಿಸುತ್ತೇನೆ.

ಕ. ಪು. ಸೀತಾರಾಮ ಕೆದಿಲಾಯ.

ಪ್ಲುತ :- ಪ್ಲುತಕ್ಕೆ ಮೂರು ಮಾತ್ರೆಗಳು. ಇದರ ಪ್ರಯೋಗ ವಿರಳ. ಹಾಡುಗಳಲ್ಲಿ ಲಯಕ್ಕೆ ಹೊಂದಿಸಿಕೊಳ್ಳಲು ಕೆಲವು ಅಕ್ಷರಗಳನ್ನು ಪ್ಲುತವಾಗಿ ಉಚ್ಚರಿಸಬೇಕಾಗುವುದು. ಬಾ ೩.

ಶಿಥಿಲದ್ವಿತ್ವ:- ಸಂಯುಕ್ತಾಕ್ಷರವು ಶಿಥಿಲದ್ವಿತ್ವವಾಗಿದ್ದರೆ ಪೂರ್ವದ ಹ್ರಸ್ವಾಕ್ಷರವು ಗುರುವಾಗುವುದಿಲ್ಲ. ಸಹಜ ಶಿಥಿಲದ್ವಿತ್ವವನ್ನು ಹೊಂದಿರುವ ಕೆಲವು ಶಬ್ದಗಳಿವೆ. *ಬರ್ದಿಲಂ, *ಗರ್ದುಗು, *ಅಮರ್ದು, *ಎರ್ದೆ, *ಎರ್ದೆವಾಯ್, *ಆದಿಮರ್ತ್ತೆ, *ಬರ್ದುಕು, *ಬರ್ದುಂಕು, *ಕರ್ದುಕು, *ಕರ್ದುಂಕು.

ಎರಡು ಲಘುಗಳಿಂದ ಕೂಡಿದ ರಳಕುಳ ರೇಫಾಂತಗಳಾದ ಶಬ್ದಗಳಿಗೆ ಗ, ದ, ವ, ಜ ಕಾರಗಳು ಪರವಾದರೆ, ಹೆಚ್ಚಾಗಿ ಶಿಥಿಲತೆ ಕಂಡುಬರುವುದು. ಇದು ನಾಮಪದಗಳಲ್ಲಿಯೂ, ಕ್ರಿಯಾಪದಗಳಲ್ಲಿಯೂ ಸಮಾಸ ಶಬ್ದಗಳಲ್ಲಿಯೂ ಬರುವುದು. *ಆಗೞ್ಗಳ್, *ಮುಗುಳ್ಗಳ್, *ಕೊನೆರ್ಗೆ, *ಪೊಗೞ್ದಂ, *ನುಸುಳ್ವಂ, *ತಳರ್ಗುಂ, *ಅಮಳ್ದೊಂಗಲ್, *ಅಲರ್ಜೊಂಪಂ ಇತ್ಯಾದಿ. ಱಕ್ಕೆ ಆದೇಶವಾಗಿ ರೇಫ ಬಂದರೂ ಶಿಥಿಲತೆ ಬರುವುದುಂಟು. *ಪೆಸರ್ಗಳ್ (ಪೆಸಱು+ಗಳ್) ಕೆಲವೆಡೆಗಳಲ್ಲಿ ಲಾಂತವಾದ ಪದಗಳಲ್ಲಿಯೂ ಶಿಥಿಲತೆ ಬರುವುದು. *ಅಗಲ್ದ

ಆದಿಗುರುವಾದರೆ ಶಿಥಿಲತೆ ಇಲ್ಲ. ಬಾಸುೞ್ಗಳ್ ಆರ್ದಂ. ಆದಿ ದೀರ್ಘವಾದರೂ ಅಂತ್ಯ ಉಪಾಂತ್ಯಸ್ವರಗಳು ಹ್ರಸ್ವವಾದರೆ ಶಿಥಿಲತೆ ಬರುವುದುಂಟು. *ಕಾದಲರ್ಗಳ್. ಕೆಲವು ಶಬ್ದಗಳನ್ನು ದ್ವಿತ್ವವಾಗಿಯೂ ಶಿಥಿಲ ದ್ವಿತ್ವವಾಗಿಯೂ ಪ್ರಯೋಗಿಸುವ ಕ್ರಮವಿದೆ. ತಗುಳ್ದಂ ಇತ್ಯಾದಿ. 'ಸುರುಳ್ದಂ' ಪದದಲ್ಲಿ ನಿತ್ಯದ್ವಿತ್ವವಿದೆ.

ಪೂರ್ವಪದದ ಅಂತ್ಯಾಕ್ಷರವು ಹ್ರಸ್ವಸ್ವರವಾಗಿದ್ದು ಪರಪದದ ಆದ್ಯಕ್ಷರವು ರೇಫಯುಕ್ತವಾದ ಸಂಯುಕ್ತಾಕ್ಷರವಾಗಿದ್ದರೆ ಪೂರ್ವಪದದ ಅಂತ್ಯಾಕ್ಷರವನ್ನು ವಿಕಲ್ಪವಾಗಿ ಲಘುವೆಂದು ಎಣಿಸುವ ಕ್ರಮವಿದೆ. "ಹರಿ ತ್ರಿಲೋಕ ಪೂಜ್ಯಂ" ಇದರಲ್ಲಿ 'ರಿ' ಅಕ್ಷರವನ್ನು ಲಘುವಾಗಿ ಅಥವಾ ಗುರು

ವಾಗಿ ಭಾವಿಸಬಹುದು. ಹಾಡುಗಳಲ್ಲಿ ಕೆಲವೆಡೆಗಳಲ್ಲಿ ಪರಪದವು ಯಾವ ರೀತಿಯ ಸಂಯುಕ್ತಾಕ್ಷರವಾದರೂ, ಪೂರ್ವಪದದ ಅಂತ್ಯಾಕ್ಷರವನ್ನು ಲಘುವಾಗಿ ಎಣಿಸುವ ಕ್ರಮವಿದೆ. ಆದರೆ ಈ ಸಂದರ್ಭದಲ್ಲಿ ಆ ಪದಗಳು ಒಂದೇ ಗಣದಲ್ಲಿ ಇರುವುದಿಲ್ಲ.

ಮಾತ್ರಾಗಣಗಳು

ದ್ವಿಮಾತ್ರಕ: ಭೂ -, ಕ್ಷಿತಿ ᑌ ᑌ

ತ್ರಿಮಾತ್ರಾಗಣ: ವ್ಯೋಮ - ᑌ, ಗಗನ ᑌ ᑌ ᑌ, ನಭಂ ᑌ -.

ಚತುರ್ಮಾತ್ರಾಗಣ: ತೋಯಂ - -, ಸಲಿಲಂ ᑌ ᑌ -, ಅಂಬುಧಿ - ᑌ ᑌ, ಜಲನಿಧಿ ᑌ ᑌ ᑌ ᑌ ಮಹಾಬ್ಧಿ ᑌ - ᑌ.

ಪಂಚ ಮಾತ್ರಾಗಣ: ವಾತಾಖ್ಯ - - ᑌ,
ಪವಮಾನ ᑌ ᑌ - ᑌ, ಗಂಧವಹ - ᑌ ᑌ ᑌ,
ಪ್ರಬಲಬಲ ᑌ ᑌ ᑌ ᑌ ᑌ, ಮಾರುತಂ - ᑌ -,
ಶಿಖಿಸಖಂ ᑌ ᑌ ᑌ -, ಸದಾಗತಿ ᑌ - ᑌ ᑌ.
ಸಮೀರಂ ᑌ - -.

ಷಣ್ಮಾತ್ರಾಗಣ: ಯಜ್ಞೇಶಂ - - -,
ವೈಶ್ವಾನರ - - ᑌ ᑌ, ಬಲಪೂರ್ಣಂ ᑌ ᑌ - -,
ಹುತಭೋಜನ ᑌ ᑌ - ᑌ ᑌ, ವೀತಿಹೋತ್ರ - ᑌ - ᑌ,
ಸುಜನವಿನುತ ᑌ ᑌ ᑌ ᑌ ᑌ ᑌ, ವಾಯುಸಖಂ - ᑌ ᑌ -.
ಸಪ್ತರಸನ - ᑌ ᑌ ᑌ ᑌ, ಭುವನಹಿತಂ ᑌ ᑌ ᑌ ᑌ -,
ಕನಕರೇತ ᑌ ᑌ ᑌ - ᑌ, ಶಿಖಾಭರಿತ ᑌ - ᑌ ᑌ ᑌ,
ಬೃಹದ್ಭಾನು ᑌ - - ᑌ, ಧನಂಜಯಂ ᑌ - ᑌ -.
ಕನ್ನಡದ ದೇಶೀಯ ಛಂದಸ್ಸಿನಲ್ಲಿ
ᑌ -, ᑌ - ᑌ, ᑌ - ᑌ ᑌ,

ᑌ – –, ᑌ – ᑌᑌᑌ, ᑌ – – ᑌ, ᑌ – ᑌ –

ಈ ಗಣಗಳ ಪ್ರಯೋಗ ವಿರಳ.

ಮಾತ್ರಾಗಣ ವಿಭಜನೆ:- ಒಂದು ಗುರುವಿನ ಎರಡು ಮಾತ್ರೆಗಳಲ್ಲಿ ಒಂದನ್ನು ಹಿಂದಿನ ಗಣಕ್ಕೂ ಇನ್ನೊಂದನ್ನು ಮುಂದಿನ ಗಣಕ್ಕೂ ಹಂಚಕೂಡದು. 'ವಿಶ್ವನಾಯಕಂ' ಎಂಬ ಪದದಲ್ಲಿ ೨ ಚತುರ್ಮಾತ್ರಾಗಣಗಳಿವೆಯೆಂದು ಭಾವಿಸಕೂಡದು. ೧ ತ್ರಿಮಾತ್ರಾಗಣವೂ ೧ ಪಂಚಮಾತ್ರಾಗಣವೂ ಇವೆಯೆಂದು ಎಣಿಸಬೇಕು.

ಈ ಪುಸ್ತಕದ ಪದ್ಯಗಳ ಲಕ್ಷಣವನ್ನು ಸೂಚಿಸುವಲ್ಲಿ ೨ = ದ್ವಿಮಾತ್ರೆ, ೩ = ತ್ರಿಮಾತ್ರಾಗಣ, ೪ = ಚತುರ್ಮಾತ್ರಾಗಣ, ೫ = ಪಂಚಮಾತ್ರಾಗಣ, ೬ = ಷಣ್ಮಾತ್ರಗಣಗಳು ಎಂದು ಭಾವಿಸಬೇಕು.

ಅಂಶಗಣಗಳು

ಅಂಶಗಣಕ್ಕೆ ಮೂಲಾಂಶ ಒಂದು ಗುರು. ಈ ಮೂಲಾಂಶದ ಗುರುವಿಗೆ ಒಂದು ಅಕ್ಷರವನ್ನು ಸೇರಿಸಿದರೆ ಬ್ರಹ್ಮಗಣವೂ, ಎರಡು ಅಕ್ಷರಗಳನ್ನು ಸೇರಿಸಿದರೆ ವಿಷ್ಣು ಗಣವೂ ಮೂರು ಅಕ್ಷರಗಳನ್ನು ಸೇರಿಸಿದರೆ ರುದ್ರಗಣವೂ ಆಗುವುವು. ಮೂಲಾಂಶದ ಗುರುವಿಗೆ ಬದಲಾಗಿ ಎರಡು ಲಘುಗಳನ್ನು ಪ್ರಯೋಗಿಸಬಹುದು. ಅನಂತರದ ಅಂಶದಲ್ಲಿ ಒಂದು ಗುರುವಿಗೆ ಬದಲಾಗಿ ಒಂದು ಲಘುವನ್ನು ಮಾತ್ರ ಇಡಬೇಕು.

ಬ್ರಹ್ಮಗಣಗಳು

ಬ್ರ . ಹ್ಮಂ – . – . ದ್ರುಹಿ . ಣಂ ᑌᑌ . – .
ಧಾ . ತೃ – . ᑌ . ಅಜ . ನೆ . ᑌᑌ . ᑌ .

ವಿಷ್ಣುಗಣಗಳು

ಗೋ . ವಿಂ . ದಂ . – . – . – . ಜಲ . ಜಾ . ಕ್ಷಂ ᑌᑌ . – . – .
ಮಾ . ಧ . ವಂ . – . ᑌ . – . ಸ್ಮರ . ಪಿ . ತಂ ᑌᑌ . ᑌ . – .
ಕಂ . ಸಾ . ರಿ – . – . ᑌ ನರ . ಕಾ . ರಿ . ᑌᑌ . – . ᑌ
ಶ್ರೀ . ಪ . ತಿ . – ᑌ . ᑌ . ಮುರ . ರಿ . ಪು ᑌᑌ . ᑌ . ᑌ .

ರುದ್ರಗಣಗಳು

ಗಂ . ಗಾ . ಧೀ . ಶಂ . – . – . – . – .
ಗಿರಿ . ಜಾ . ನಾ . ಥಂ . ∪ ∪ . – . – . – .
ನೀ . ಲ . ಕಂ . ಠಂ . – . ∪ . – . – .
ವೃಷ . ಭ . ಲ . ಕ್ಷ್ಮಂ ∪ ∪ . ∪ . – . – .
ಕಾ . ಮಾಂ . ತ . ಕಂ . – . – . ∪ . – .
ಪ್ರಮ . ಥಾ . ಧಿ . ಪಂ . ∪ ∪ . – . ∪ . – .
ಶೂ . ಲ . ಧ . ರಂ . – . ∪ . ∪ . – .
ಪುರ . ಮ . ಥ . ನಂ . ∪ ∪ . ∪ . ∪ . – .
ಕಂ . ದ . ರ್ಪಾ . ರಿ . – . – . – . ∪ .
ಮದ . ನ . ಧ್ವಂ . ಸಿ ∪ ∪ . – . – . ∪ .
ಚಂ . ದ್ರ . ಮೌ . ಳಿ – . ∪ . – . ∪ .
ಭುಜ . ಗ . ಧಾ . ರಿ ∪ ∪ . ∪ . – . – .
ಭೂ . ತಾ . ಗ್ರ . ಣಿ – . – . ∪ . ∪ .
ತ್ರಿಜ . ಗ . ದ್ಗು . ರು ∪ ∪ . – . ∪ . ∪ .
ಕಾ . ಮ . ರಿ . ಪು – . ∪ . ∪ . ∪
ಮದ . ನ . ರಿ . ಪು ∪ ∪ . ∪ . ∪ . ∪ .

ಈ ಪುಸ್ತಕದಲ್ಲಿ ಪದ್ಯಗಳ ಲಕ್ಷಣವನ್ನು ಸೂಚಿಸುವಲ್ಲಿ ಬ್ರ = ಬ್ರಹ್ಮ ಗಣ, ವಿ = ವಿಷ್ಣುಗಣ, ರು = ರುದ್ರಗಣ, ಲ = ಲಘು, ಗು = ಗುರು ಎಂದು ತಿಳಿಯಬೇಕು.

ವರ್ಣ ಗಣಗಳು

ಲಘು ಗುರು ಅಕ್ಷರಗಳ ಸಂಯೋಜನೆಯಿಂದ ಪ್ರತಿಯೊಂದು ಗಣಕ್ಕೂ ಮೂರು ಅಕ್ಷರಗಳಿರುವ ಯಗಣ, ಮಗಣ, ತಗಣ, ರಗಣ, ಜಗಣ, ಭಗಣ, ನಗಣ, ಸಗಣ ಎಂಬ ಎಂಟು ಗಣಗಳಾಗುವುವು. ಗಣಗಳ ಹೆಸರಿನ ಅಕ್ಷರಗಳನ್ನೂ ಲಘು ಗುರುಗಳ ಬದಲು ಲ, ಗಂ ಎಂಬ ಸಂಜ್ಞಾ ಕ್ಷರಗಳನ್ನೂ ಸೇರಿಸಿ, "ಯಮಾತಾರಾಜಭಾನಸಲಗಂ" ಎಂಬ ಸೂತ್ರವನ್ನು

ಕಲ್ಪಿಸಿರುವರು. ಈ ಸೂತ್ರಮಾಲೆಯಿಂದ ಅನುಕ್ರಮವಾಗಿ ಮೂರು ಅಕ್ಷರಗಳನ್ನು ತೆಗೆದುಕೊಂಡರೆ ಮೊದಲನೆಯ ಅಕ್ಷರದಿಂದ ಗಣದ ಹೆಸರನ್ನೂ, ಆ ಮೂರು ಅಕ್ಷರಗಳ ಗಣದಲ್ಲಿರುವ ಲಘು ಗುರುಗಳ ಭೇದ ವನ್ನೂ ತಿಳಿಯಬಹುದು.

ಯಗಣ:- ಯಮಾತಾ – ಸಮುದ್ರಂ ∪ – ∪ – –
ಮಗಣ :- ಮಾತಾರಾ – ಭೂಚಕ್ರಂ – – –
ತಗಣ :- ತಾರಾಜ – ಆಕಾಶ – – ∪
ರಗಣ :- ರಾಜಭಾ – ಪಾವಕಂ – ∪ –
ಜಗಣ :- ಜಭಾನ – ದಿನೇಶ ∪ – ∪
ಭಗಣ :- ಭಾನಸ – ಚಂದ್ರಮ – ∪ ∪
ನಗಣ :- ನಸಲ – ತ್ರಿದಿವ ∪ ∪ ∪
ಸಗಣ :- ಸಲಗಂ – ಪವನಂ ∪ ∪ –

ಈ ಗಣಗಳು ಸಂಸ್ಕೃತದ ವರ್ಣ ವೃತ್ತಗಳ ಛಂದೋ ಲಕ್ಷಣವನ್ನು ಸೂಚಿಸಲು ಅನುಕೂಲವಾಗುವುವು.

ಪ್ರಾಸ

ಆದಿಪ್ರಾಸ:- ಒಂದು ಪದ್ಯದ ಪ್ರತಿ ಪಾದದಲ್ಲಿಯೂ ಆದಿಯ ಒಂದನೆಯ ಎರಡನೆಯ ಸ್ವರಗಳ ನಡುವೆ ಒಂದೇ ವಿಧವಾದ ವ್ಯಂಜನವಿರು ವುದು ಆದಿಪ್ರಾಸದ ಲಕ್ಷಣ. ಹರಿ, ಧರೆ. ಒಂದು ಪಾದದಲ್ಲಿ ಆದ್ಯಕ್ಷರವು ಲಘು ವಾಗಿದ್ದರೆ, ಉಳಿದ ಪಾದಗಳ ಮೊದಲನೆಯ ಅಕ್ಷರವೂ ಲಘುವಾಗಬೇಕು. ಒಂದು ಪಾದದಲ್ಲಿ ಆದ್ಯಕ್ಷರವು ಯಾವ ರೀತಿಯಲ್ಲಿ ಗುರುವಾಗುವುದೋ ಅದೇ ರೀತಿಯಲ್ಲಿ ಇತರ ಪಾದಗಳ ಮೊದಲ ಅಕ್ಷರವೂ ಗುರುವಾಗಬೇಕು. ಪ್ರಾಸಾಕ್ಷರದ ಹಿಂದಿನ ಸ್ವರವು ಹ್ರಸ್ವರವಾಗಿದ್ದರೆ ಸಿಂಹಪ್ರಾಸ; ದೀರ್ಘವಾಗಿ ದ್ದರೆ ಗಜಪ್ರಾಸ. ಪ್ರಾಸಾಕ್ಷರದ ಹಿಂದೆ ಅನುಸ್ವಾರವಿದ್ದರೆ ವೃಷಭ ಪ್ರಾಸ; ವಿಸರ್ಗವಿದ್ದರೆ ಅಜಪ್ರಾಸ. ಪ್ರಾಸಾಕ್ಷರದ ಹಿಂದೆ ವಿಸರ್ಗ ಅನುಸ್ವಾರಗಳಿ ಲ್ಲದೆ, ಅದು ಸಜಾತೀಯ ಸಂಯುಕ್ತಾಕ್ಷರವಾಗಿದ್ದರೆ ಹಯ ಪ್ರಾಸ; ವಿಜಾತೀಯ ಸಂಯುಕ್ತಾಕ್ಷರವಾಗಿದ್ದರೆ ಶರಭಪ್ರಾಸ.

ಅಂತ್ಯಪ್ರಾಸ:- ಒಂದೇ ವಿಧವಾದ ಸ್ವರದಿಂದ ಕೂಡಿದ ಸಜಾತೀಯ ವ್ಯಂಜನಾಕ್ಷರವು ಪ್ರತಿಪಾದಾಂತ್ಯದಲ್ಲಿ ಬಂದು, ಅದರ ಹಿಂದಿನ ದೀರ್ಘ ಹ್ರಸ್ವಗಳಲ್ಲಿ ಸಾಮ್ಯವಿದ್ದರೆ ಅಂತ್ಯಪ್ರಾಸವಾಗುವುದು :- ಕೂಡಿ, ನೋಡಿ. ಈ ಪುಸ್ತಕದ ದೃಷ್ಟಾಂತ ಪದ್ಯಗಳಲ್ಲಿ ಪ್ರಾಸಾಕ್ಷರಗಳನ್ನು ದಪ್ಪವಾದ ಅಕ್ಷರಗಳಲ್ಲಿ ಬರೆದಿದೆ.

ಯತಿ :- ಪದ್ಯಗಳನ್ನು ಓದುವಾಗ ಅರ್ಥ ಸ್ಫೂರ್ತಿ ಕೆಡದಂತೆ ಉಸಿರು ಬಿಡಲು ನಿಲ್ಲಿಸುವ ಸ್ಥಾನಕ್ಕೆ ಯತಿ ಎಂದು ಹೆಸರು. ಕನ್ನಡದಲ್ಲಿ ಹೆಚ್ಚಾಗಿ ಕವಿಗಳು ಯತಿ ನಿಯಮವನ್ನು ಉಲ್ಲಂಘಿಸಿ ಪದ್ಯಗಳನ್ನು ಬರೆದಿರುವರು. ಯಕ್ಷಗಾನದ ಹಾಡುಗಳಲ್ಲಿ ಕೆಲವು ನಿಶ್ಚಿತ ಸ್ಥಾನಗಳಲ್ಲಿ ಯತಿ ಬರಬೇಕಾಗುವುದು. ಈ ಪುಸ್ತಕದಲ್ಲಿರುವ ಪದ್ಯಗಳ ಕೆಲವು ಪಾದಾಂತಗಳಲ್ಲಿ || ಈ ಗೆರೆಗಳು ಇರುವಲ್ಲಿ ಯತಿ ಇರಲೇ ಬೇಕು.

ಮಾತ್ರಾಗಣದ ಷಟ್ಪದಿಗಳು

ಶರಷಟ್ಪದಿ

ಳ ಳ ಳ ಳ
ಈ**ಶ**ನ . ಕರುಣೆಯ | ನಾ**ಶಿ**ಸು . ವಿನಯದಿ |
ಳ ಳ ಳ ಗು
ದಾ**ಸ**ನ . ಹಾಗೆಯೆ . ನೀಮನ . ವೇಽ ||
ಳ ಳ ಳ ಳ
ಕ್ಲೇ**ಶ**ದ . ವಿಧವಿಧ | ಪಾ**ಶ**ವ . ಹರಿದುವಿ |
ಳ ಳ ಳ ಗು
ಲಾ**ಸ**ದಿ . ಸತ್ಯವ . ತಿಳಿಮನ . ವೇಽ ||

ಕುಸುಮ ಷಟ್ಪದಿ

೫ ೫ ೫ ೫
ನ**ಡೆ**ದು ಕೆಲ . ವೆಡೆಯೊಳಂ | ತ**ಡೆ**ದುತಡೆ . ದಲ್ಲಲ್ಲಿ |
೫ ೫ ೫ ಗು
ಯೆ**ಡೆ**ಯೆಡೆಯ . ತರುಚಯಂ . ಗಳ ತೋರು . ತಽ ||

೫ ೫ ೫ ೫
ಅಡಿಗಡಿಗೆ . ನಮಗಿನ್ನು । ಬಿಡುವ ತಾ . ವಾವುದೆಂ ।

೫ ೫ ೫ ಗು
ದೊಡರಿಸಿದ . ಳಳಲನವ . ನಿಜೆ ರಾಮ . ಗೆಽ ॥

ಭೋಗ ಷಟ್ಪದಿ

೩ ೩ ೩ ೩ ೩ ೩ ೩ ೩
ಮೆರೆಯುತಿದ್ದ . ಭಾಗ್ಯವೆಲ್ಲ।ಹರಿದು . ಹೋಯಿ . ತೆನುತ . ತಿರುಕ।

೩ ೩ ೩ ೩ ೩ ೩ ಗು
ಮರಳಿ . ನಾಚಿ . ಪೋಗು . ತಿದ್ದ . ಮುನ್ನಿ . ನಂತೆ . ಯೆಽ ॥

೩ ೩ ೩ ೩ ೩ ೩ ೩ ೩
ಧರೆಯ . ಭೋಗ . ವನ್ನು . ಮೆಚ್ಚಿ । ಪರವ . ಮರೆತು . ಕೆಡಲು . ಬೇಡ ।

೩ ೩ ೩ ೩ ೩ ೩ ಗು
ಧರೆಯ . ಭೋಗ . ಕನಸಿ . ನಂತೆ . ಕೇಳು . ಮಾನ . ವಽ ॥

ಭಾಮಿನಿ ಷಟ್ಪದಿ

೩ ೪ ೩ ೪ ೩
ಇರುಬಿ . ನೊಳು ಸಿ . ಕ್ಕಿರ್ದ . ಹುಲಿಯನು । ಮುರಿದು .

೪ ೪ ೪ ೩ ೪
ಕಳೆಯದೆ . ತಳಪ . ಟಕೆ ಬಿ । ಟ್ಟರಿಯ . ಬಹುದೇ?

೩ ೪ ೩ ೪ ಗು
ಕೊಂದು . ಕೂಗದೆ . ಬಿಡುವು . ದೇ? ಬಳಿ . ಕಽ ॥

೩ ೪ ೩ ೪ ೩
ಕರುಬ . ರಹ ಪಾಂ . ಡವರಿ . ಗೀಗಲೆ । ಹರುವ . ನೆನೆ

೪ ೩ ೪ ೩ ೪
ಹೊರ . ಬಿದ್ದ . ರಾದೊಡೆ! ತರಿದು . ಬಿಸುಡದೆ .

೩ ೪ ೩ ೪ ಗು
ಮಾಣ್ಬ . ರೇ ಹೇ . ಳೆಂದ . ನಾಶಕು . ನಿಽ ॥

ಪರಿವರ್ಧಿನಿ ಷಟ್ಪದಿ

೪ ೪ ೪ ೪
ಎರಲೆಯ . ಬೀಡೆ . ಕ್ಕಲನ ಕೊ . ಟಾರಂ ।
೪ ೪ ೪ ೪
ಕರಡಿಯ . ಹಟ್ಟಿ ಕ . ಡವೆಯೂರ್ . ಚಮರಿಯ ।
೪ ೪ ೪ ೪ ೪ ೪ ಗು
ಹುರವೆಂ . ಓಡಿಯ ಪೊ . ಳಲ್ ಕಾ . ಟಿಯ ಕೊ . ಟ್ಟಂ ಖ . ಡ್ಗಿಯ ಪ . ಳ್ಳಿಽ ॥
೪ ೪ ೪ ೪
ಅರಸು ಮಿ . ಗದ ಪ . ಟ್ಟಣ ಮಾ . ನೆಯ ಮಟ ।
೪ ೪ ೪ ೪
ಮೆರಲುಣಿ . ಗಳ ನೆಲೆ . ಮನೆಯೆನ . ಲತಿ ಬಂ ।
೪ ೪ ೪ ೪ ೪ ೪ ಗು
ಧುರವಾ . ದುದು ಭೀ . ಮಾರ . ಣ್ಯಮಗ . ಣ್ಯ ಮೃಗಾ . ಳಿ ಶರ . ಣ್ಯಂ ॥

ವಾರ್ಧಿಕ ಷಟ್ಪದಿ

೫ ೫ ೫ ೫
ಪತಿದೈವ . ಮೆಂದರಿದು . ನಡೆವ ಸತಿ . ಗಹುದು ಪರ ।
೫ ೫ ೫ ೫
ಗತಿಯಲ್ಲ . ದಂಗನೆಯ . ರತಿ ಸಾಹ . ಸಿಗಳವರ ।
೫ ೫ ೫ ೫
ಕೃತಕ ಶೀ . ಲಂಗಳಂ . ನಂಬಲಾ . ಗದು ಮೋಕ್ಷ ಸ್ವ .
೫ ೫ ಗು
ತಂತ್ರಮಂ . ಕುಡಲಾಗ . ದುಽ ॥
೫ ೫ ೫ ೫
ಪಿತನಿಂದ . ಬಾಲ್ಯದೊಳ್ . ಪತಿಯಿಂದ . ಹರೆಯದೊಳ್ ।
೫ ೫ ೫ ೫
ಸುತನಿಂದ . ವೃದ್ಧಾಪ್ಯ . ದೊಳ್ ಕುಲ . ಸ್ತ್ರೀಸುರ ।
೫ ೫ ೫ ೫
ಕ್ಷಿತೆಯಾಗ . ದಿರ್ದೊಡವ . ಳಿಂದ ನಿಜ . ವಂಶಕುಪ .
೫ ೫ ಗು
ಹತಿ ಬಾರದಿರದಿಳೆಯೊ . ಳುಽ ॥

ದ್ವಿಪದಿ

೫ ೫ ೫ ೨ ಗು
ಪರಮಾತ್ಮ. ನಾರೆಂದು . ತಿಳಿಯಲೆಳ . ಸುವೆಯಾ ||
೫ ೫ ೫ ೨ ಗು
ಇರುವನೆ . ತ್ತಲೆನುತ್ತ . ಕೇಳಲಿ . ಚ್ಛಿಪೆಯಾ ||

ತ್ರಿಪದಿ

ಪ್ರಾಚೀನ ಕಾವ್ಯಗಳ ತ್ರಿಪದಿಗಳಲ್ಲಿ ಅಂಶಗಣ ನಿಯಮವು ಕಂಡು ಬರುವುದು.

ವಿ ವಿ ವಿ ವಿ
ಕೇಡನಾ . ಗೆಂದಾಗಂ . ಕೇಡೆಂದು . ವಿಪರೀತಂ |
ವಿ ಬ್ರ ವಿ ವಿ
ಮಾಡಿಯೆ . ನೆಗಟ್ದು . ಜಡಜಂತು . ಮೂಡಿಮು |
ವಿ ಬ್ರ ವಿ
ಬ್ಬಾಡುಗುಂ . ಜನ್ಮ . ಜಡಧಿಯೊಳ್ ||

ಕಾಲಕ್ರಮೇಣ ವಿಷ್ಣುಗಣದ ಬದಲು ಪಂಚ ಮಾತ್ರಾಗಣವನ್ನೂ ಬ್ರಹ್ಮಗಣದ ಬದಲು ತ್ರಿಮಾತ್ರಾಗಣವನ್ನೂ ಪ್ರಯೋಗಿಸುವ ಕ್ರಮವು ಬಳಕೆಯಲ್ಲಿ ಬಂತು.

೫ ೫ ೫ ೫
ಇಂಗಡಲೊ . ಳಿಂಪು ಜೆಳ್ . ದಿಂಗಳೊಳು . ತಂಪು ಕುಸು |
೫ ೩ ೫ ೫
ಮಂಗಳೊಳು . ಕಂಪು . ಬೆರೆದಂತೆ . ಪರಮನೊಳು |
೫ ೩ ೫
ಪಿಂಗದಗ . ಸುತೆಗೆ . ನತನಪ್ಪೆ ||

ಕಂದ

ಕಂದವು ನಾಲ್ಕು ಪಾದಗಳಿರುವ ಅರ್ಧಸಮವೃತ್ತ. ಒಂದನೆಯ ಪಾದದಲ್ಲಿ ಮೂರು ಚತುರ್ಮಾತ್ರಾಗಣಗಳೂ, ಎರಡನೆಯ ಪಾದದಲ್ಲಿ ಐದು ಚತುರ್ಮಾತ್ರಾಗಣಗಳೂ ಇವೆ. ಹೀಗೆ ಎರಡು ಪಾದಗಳಲ್ಲಿ ಎಂಟು

ಚತುರ್ಮಾತ್ರಾಗಣಗಳಾಗುವುವು. ಒಂದನೆಯ, ಮೂರನೆಯ, ಐದನೆಯ, ಏಳನೆಯ ಗಣಗಳು ಜಗಣ (∪ – ∪) ಗಳಾಗಿ ಬರಕೂಡದು. ಆರನೆಯ ಗಣವು ಜಗಣ (∪ – ∪) ವಾಗಲೀ, ನಾಲ್ಕು ಲಘುವಿರುವಗಣ (∪∪∪∪) ವಾಗಲೀ, ಆಗಿರಬೇಕು. ಎಂಟನೆಯ ಸ್ಥಾನದಲ್ಲಿ ಅಂತ್ಯ ಗುರುವಿರುವ ಚತುರ್ಮಾತ್ರಾಗಣವಿರಬೇಕು. ಈ ಪೂರ್ವಾರ್ಧ ಪದ್ಯದಂತೆ ಮುಂದಿನ ಉತ್ತರಾರ್ಧ ಪದ್ಯವಿರಬೇಕು.

ಳ ಳ ಳ
ಪ್ರತಿಭಾ . ವತ್ವಮು . ಮುಕ್ಕತಕ ।
ಳ ಳ ಳ ಳ ೨ ಗು
ಚತುರತೆ ಯುಂ ಪರ . ಮ ಬುಧಜ . ನೋಪಾ . ಸನಮುಂ ।
ಳ ಳ ಳ
ಕೃತಿಪರಿ . ಚಯಮುಂ . ತರ್ಕ೦ ।
ಳ ಳ ಳ ಳ ೨ ಗು
ಪ್ರತೀತಿ . ಯಂ ವಾ . ಗ್ಮಿದಗ್ಧ . ತಾ ನಿಪು . ಣತೆಯೊಳ್ ॥

ವರ್ಣ ವೃತ್ತಗಳು

ನಾಲ್ಕು ಪಾದಗಳಲ್ಲಿಯೂ ಒಂದೇ ಲಕ್ಷಣವಿರುವ ಕೆಲವು ಸಮವೃತ್ತಗಳನ್ನು ಕೆಳಗೆ ಬರೆದಿದೆ.

ಯ, ಮ, ತ, ರ, ಜ, ಭ, ನ, ಸ, ಅಕ್ಷರಗಳು ಗಣಗಳ ಸಂಜ್ಞೆಗಳೆಂದೂ 'ಲ' ಎಂದರೆ ಲಘುವೆಂದೂ, 'ಗು' ಎಂದರೆ ಗುರುವೆಂದೂ ಭಾವಿಸಬೇಕು.

ಶಾರ್ದೂಲ ವಿಕ್ರೀಡಿತ ವೃತ್ತ

ಮ ಸ ಜ ಸ ತ ತ ಗು
ಶ್ರೀರಾಮಾ . ನಟಿಕಾ . ಸ್ತುಭದ್ಯ . ತಿಕಿರ . ತ್ಪಪ್ಪಾಂಜ . ಲಿಕ್ಷೇಪ . ವ ।
ಕ್ಷೋರಂಗ. ಸ್ಥಿತೆಯಾ .ದ ಪಾದ . ನಖರೋ. ಚಿರ್ಗಂಗೆ.ಪೃಥ್ವೀಶ. ಕೋ ।
ಟೀರವ್ಯಾ . ಪ್ತಿಗೆ ಸಂ . ದ ಚಕ್ರ . ರವಿದ್ವೈ . ತ್ಯಧ್ವಾಂತ . ಮಂಗೆಲ್ದ . ಭೂ ।
ಭಾರಚ್ಛೇ . ದವಿನೋ . ದಿಕೃಷ್ಣ . ನೆಮಗೀ . ಗಾನಂದ . ಸಂದೋಹ . ಮಂ ।

ಮತ್ತೇಭ ವಿಕ್ರೀಡಿತ ವೃತ್ತ

ಸ ಭ ರ ನ ಮ ಯ ಲ ಗು

ಗುರುವಂ.ಪ್ರೋಜ್ಝಿತ.ಚಾಪನಂ.ಪುಸಿದು.ಕೊಂದಾಬೀ.ರನಂಭೀ.ಷ್ಮ.ರಂ।
ಶರಶ.ಯ್ಯಾಗತ.ರಂ ಕಱು.ತ್ತುಗುಱಿ.ಯಿಟ್ಟಾ.ಪ್ರೊ.ಚ್ಚಱಂಕ.ರ್ಣ.ನಂ।
ವಿರಥ.ಜ್ಯಾಯುಧ ನೆನ್ನದೆ.ಚ್ಚುತಲೆ.ಗೊಂಡಾಶೌ.ರ್ಯಮಂಪಾಂ.ಡು.ಪು।
ತ್ರರೆಲ್ಲರ್ ಮೆಱೆ.ಯಲ್ಕೆಸಾ.ಹಸಧ.ನಂದುರ್ಯೋ.ಧನಂಬ.ಲ್ಲ.ನೇ॥

ಉತ್ಪಲಮಾಲಾ ವೃತ್ತ

ಭ ರ ನ ಭ ಭ ರ ಲ ಗು

ಪಾಸಱೆ.ಸಿಂಹಪೀ.ಠಮಳಿ.ನೀರುತಿ.ಮಂಗಳ.ಗೀತಿಭೂ.ತ.ಳಂ।
ಪಾಸುವ್ಯ.ಗವ್ರಜಂ.ಪರಿಜ.ನಂಪೊದ ಱೋಲಗ.ಸಾಲೆಮೊ.ಕ್ಕ.ಳಂ।
ಬೀಸುವ.ಗಾಳಿಚಾ.ಮರದ.ಗಾಳಿಯೆ.ನಲ್ ದೊರೆ.ಪೆತ್ತದೇಂ.ಸು.ಖಾ।
ವಾಸನಿ.ಮಿತ್ತಮಾ.ಯ್ತೊವನ.ವಾಸನಿ.ವಾಸಮೆ.ಪಾಂಡುಪು.ತ್ರ.ರಾ॥

ಚಂಪಕ ಮಾಲಾವೃತ್ತ

ನ ಜ ಭ ಜ ಜ ಜ ರ

ಸಕಳ.ಮಧುವ್ರ.ತಪ್ರಚ.ಯಮೆಂಬ.ಪಿಕಾವ.ಳಿಯೆಂಬ.ಸದ್ವಚಃ।
ಶುಕಕು.ಳಮೆಂಬ.ಮೆಚ್ಚಿಸಿ.ದಗಾಯ.ಕಸತ್ಕೃ.ತಿಹಾರ.ವೃತ್ತಪಾ।
ಠಕತ.ತಿಗಿತ್ತ.ನಗ್ಗಳ.ದಮಾವಿ.ನಪೂವಿ.ಸಮಾವಿ.ನಂಕುರ।
ಪ್ರಕರ.ದಮಾವಿ.ನೊಳ್ಕ್ರಿಡಿ.ಯಜೀವಿ.ತಮಂಮ.ನಂವ.ಸಂತದೊಳ್॥

ಸ್ರಗ್ಧರಾವೃತ್ತ

ಮ ರ ಭ ನ ಯ ಯ ಯ

ಈವಜ್ರಾ.ವರ್ತಕೋ ದಂಡಮ.ನವಯ.ವದಿಂದೇ.ಱಿಸಲ್ ಸಾ.ಲ್ವದೋರ್ದಂ
ಡಾವಷ್ಟಂ.ಭಪ್ರಚಂ.ಡಂಜನ.ಕಜೆಗೆ.ವರಂಬ.ರ್ಪುದೆಂಬೀ.ವ್ಯವಸ್ಥಾ।
ರಾವೆಂಕ.ರ್ಣಾವತಂ ಸಂಪಸ.ರಿಸೆನಿ.ಜಪೀಠಂ.ಗಳಿಂದೆ.ಬ್ಬಿದಾಗಳ್।
ತೀವೃತ್ತಿ.ರ್ಪನ್ನಗಂ.ಭೂಷಣ.ರುಚಿಕ.ಕುಭಾನೀ.ಕಮಂರಾ.ಜಲೋಕಂ॥

ಮಹಾಸ್ರಗ್ಧರಾವೃತ್ತ

ಸ ತ ತ ನ ಸ ರ ರ ಗು
ಸುರೆಯಿಂ.ಸೊರ್ಕಂಸು.ರೋವಿರ್ಗರು.ಹರಿಸ.ಲಯದಿಂ.ರಾಗಮಂ.ಕೌಸ್ತುಭ.ಪ್ರ |
ಸ್ತ್ರರದಿಂ.ನೈಷ್ಠುರ್ಯರ್ಗೆ.ಮಂದುರ್ವಿ.ಷಮವಿ.ಷದಿನು.ನ್ಮೋಹಮಂ.ಮುಗ್ಧದೋ.ಷಾ |
ಕರೆನ್ನಿಂ.ವಕ್ರತ್ವ.ಮಂದುಶ್ಚೈ.ವನನ.ಹಯದಿಂ.ವೇಗಮಂ.ತಾಳ್ದಿನೀ.ರಾ |
ಕರದಿಂ.ದೆಟ್ಟಿಂದ.ಳಂತಾಸಿ.ರಿಸಹ.ಭವರಂ.ಪೋಲ್ವುದೇಂ.ಚೋದ್ಯವಾ.ಯ್ತೇ? ||

ಮಾತ್ರಾಗಣದ ಪದ್ಯಗಳು

ರೂಪಕ ತಾಳ

ಶಂಕರಾಭರಣ

೩ ೩ ೩ ೩ ೩ ೩ ಗು
ಮುಂದೆ . ರಾಮ . ನಡುವೆ ಸೀತೆ . ಹಿಂದೆ . ಲಕ್ಷ್ಮ . ಣಽ ||

೩ ೩ ೩ ೩ ೩ ೩ ಗು
ಅಂಚು . ಚಿತ್ರ . ಕೂಟ . ದಿಂದ . ಪೊರಟ . ರಾಕ್ಷ . ಣಽ ||

ಸಾವೇರಿ

ಗು ೬ ೩ ೩ ೩ ೩ ಗು
ಆ | ನಂದಮುಖೀ . ಸುಂದ . ರಾಂಗಿ . ಮಂದ . ಗಾಮಿ . ನೀ ||

೩ ೩ ೩ ೩ ೩ ೩ ಗು
ಬಂದ . ಬವಣೆ . ಪೇಳ್ವೆ . ನಾದಿ . ಯಿಂದ . ಕಾಮಿ . ನೀ || ಪಲ್ಲವಿ ||

ಗು ೩ ೩ ೩ ೩* ೩ ೩ ಗು
ದೈ | ತ್ಯಾಳಿ . ನಮ್ಮ . ಕಾಳು . ಗೈವರ್ . ಪೇಳ . ಲೇನ . ದಽ ||

೩ ೩ ೩ ೩ ೩ ೩ ಗು
ಭಾಳ . ನೇತ್ರ . ಖೂಳ . ರಿಽಗೆ . ಪಾಲಿ . ಸಿಹಮ . ದಽ ||

ತೋಡಿ

ಇ   ಇ   ಇ   ಇ   ಗು   ಗು   ಇ
ಕಂಡ . ಳಾಗ . ಶಚಿಯು . ದೂರ . ದಿಽ ॥ ರ . ಕ್ಕಸಿಯು.

ಇ   ಇ   ಇ   ಇ   ಇ ಗು
ಕೋಪ । ಗೊಂಡು . ಪೇಳ್ದ . ಳತಿವಿ . ಚಾರ . ದಿಽ ॥

ಇ   ಇ   ಇ   ಇ   ಇ   ಇ
ಗಂಡ . ನೆಡೆಯೊ . ಳಿಲ್ಲ . ನೋಡೆ । ಷಂಡ . ನವನ* .

ಇ   ಇ   ಇ   ಇ
ಲ್ಲದೊಡೆ . ಸತಿಯ । ಭಂಡ . ತನದೊ . ಳಕಟೆ .

ಇ   ಇ   ಇ   ಇ   ಇ
ಮರನ । ಏಂಡಿ . ನೊಳಗೆ . ಬಿಡಲು . ಬಹುದೆ? ॥

ಘಂಟಾರವ

ಇ   ಇ   ಗು   ಇ   ಇ   ಗು
ವನಜ . ಲೋಚ . ನೆಽ . ಅಘವಿ . ಮೋಚ . ನೆಽ ॥

ಇ   ಇ   ಗು ಇ   ಇ   ಗು
ದನುಜ . ಮರ್ದ . ನೆಽ . ಕೀರ್ತಿ . ವರ್ಧ . ನೆಽ ॥

ಇ   ಇ   ಗು ಇ   ಇ   ಗು
ಇನಿತು . ಕೆಲಸ . ಕೆಽ . ಎನ್ನ . ನೇತ . ಕೆಽ ॥

ಇ   ಇ   ಗು   ಇ   ಇ   ಗು
ಘನವ . ಮಾಡು . ವೆಽ . ಪಿರಿದು . ಪೊಗಳು . ವೆಽ ॥

ಬೇಹಾಗ್

ಇ . ಇ . ಇ . ಇ   ಇ   ಇ
ಸುಲಲಿ . ತಾಂಗಿ . ಸಲಿಲ . ಜಾಕ್ಷಿ । ಛಲವಿ . ದೇನೆ .

ಇ ಗು   ಇ   ಇ
ಮೋಹ . ನೆಃ ॥ ಪಲ್ಲವಿ ॥ ತುಂಬಿ . ಗುರುಳೆ .

ಇ   ಇ   ಇ   ಇ   ಇ   ಗು .
ರಂಬೆ . ಶಾತ । ಕುಂಭ . ಕುಂಭ . ನಿಭಕು . ಚೇ ॥

ಇ   ಇ   ಇ   ಇ   ಇ   ಇ   ಇ   ಗು
ಹಂಬ . ಲಿಸದಿ . ರಬಲೆ . ಭಯವಿ । ದೆಂಬ . ರೇನೆ . ಭಾಮಿ . ನೀ ॥.

ಕಲ್ಯಾಣಿ

೩ . ೩ ೩ ೩ ೩ ೩ ಗು
ಅಜಕು . ಮಾರ . ಧೀರ . ವೀರ . ಬಾಹು . ವಿಕ್ರ . ಮS ‖ ಪಲ್ಲವಿ ‖

೩ ೩ ೩ ೩ ೩ ೩ ೩ ೩
ಸುಜನ . ರಕ್ಷೆ . ಚಿಂತೆ . ಬೇಡ . ಸೂರ್ಯ . ವಂಶ . ಭೂಮಿ . ಪಾಲ ।

೩ ೩ ೩ ೩ ೩ ೩ ಗು
ಭಜಕ . ರಿಷ್ಟ . ವೀವ . ರಾಮ . ನನ್ನ . ಕಳುಹಿ . ಸುS ‖.

ಪಂತುವರಾಳಿ

೩ ೩ ೩ ೩ ೩ ೩ ಗು
ಮನೆಯ . ಗೆದ್ದ . ಮಾರ . ಗೆಲುವ । ಮನೆವ ಮಾಡಿ . ರಿS ‖

೩ ೩ ೩ ೩ ೩ ೩ ಗು
ದನುಜ . ರೆಲ್ಲ . ಕೂಡಿ . ಚಿತ್ತ । ದನುವ . ನೋಡಿ . ರಿS ‖ ಪಲ್ಲವಿ ‖

೩ ೩ ೩ ೩ ೩ ೩ ೩ ೩
ಧನಪ . ವಿಶ್ರ . ವಸುವಿ . ನಾದಿ । ವನಿತೆ . ಯಲ್ಲಿ . ಜನಿಸಿ . ಮರಳಿ ।

೩ ೩ ೩ ೩ ೩ ೩ ಗು
ಜನಕ . ನಾಜ್ಞೆ . ಯಿಂದ . ನಮ್ಮ । ದನುಜ . ರಾಳು . ವS ‖

೩ ೩ ೩ ೩ ೩ ೩ ೩ ೩
ಘನಸು . ಲಂಕೆ . ಯಲ್ಲಿ . ಮೆರೆವ । ನನುಜ . ನೀ ಕು . ಬೇರ ಗೆನುವ ।

೩ ೩ ೬ ೩ ೩ ಗು
ದಿನಿತು . ಕಥೆಯ . ನೀಗ-ದಶಾ । ನನಗೆ . ವಿವರಿ . ಸಿS ‖.

ನಾಟಿ

೪ ೪ ೪ ೪ ೪ ೪
ಜಯಜಯ . ಗಣಗಣ . ನಾಯಕ । ಜಯಜಯ . ಮಂಗಳ . ದಾಯಕ ।

೪ ೪ ೪ ೪ ೪ ಗು .
ಜಯಜಯ . ವಿಘ್ನನಿ . ವಾರಕ । ಜಯಜಯ . ಸಿರಿಬೆನ . ಕS ‖.

ನೀಲಾಂಬರಿ

೪ ೪ ೪ ೪ ೪ ೪
ಅಕಟಕ . ಟೀನ್ ಬವ . ಣೆಯೊ ಸುರ । ನಿಕರಕೆ . ಕರ್ಬುರ . ರಿಂದಲಿ ।

೪ ೪ ೪ ೪ ೪ ಗು
ಮಖಹರ . ನೀನೀ . ತ್ರಿದಶರ | ಯುಕುತನೆ . ಮರೆತಿಹು-ದುಽ || ಪಲ್ಲವಿ ||

೪ ೪ ೪ ೪ ೪ ೪
ತಾರಕ . ನುಪಟಳ . ಕಂಜಾತ | ದೂರಲು . ಷಣ್ಮುಖ . ನಿಂದಲಿ |

೪ ೪ ೪ ೪ ೪ ಗು
ತೋರಿದೆ . ಖಳರಿಗೆ . ದಾರಿಯ | ಪಾರವು . ಹಿಮ ನಿ . ನ್ನಽ ||

೪ ೪ ೪ ೪ ೪ ೪
ಸೇರಿಹೆ . ವಲ್ಲದೆ . ಮರೆತಿರ | ಲಾರೊ . ಮ್ಮವಕಸು . ರರ್ಕಳ |

೪ ೪ ೪ ೪ ೪ ಗು
ಭಾರಿಯ . ಭಯ ಪರಿಹರಿಸೆಲೆ | ಮಾರಾ . ರಿಯೆಂದಯ . ದಿಽ ||

[ಪಲ್ಲವಿಯನ್ನು ಮಾತ್ರವೇ ಪೂರ್ಣ ಪದ್ಯವೆಂದು ಬರೆಯುವ ಕ್ರಮವಿದೆ. ಪಲ್ಲವಿ ಇಡದೆ, ಮುಂದಿನ ಪದ್ಯವನ್ನೆ ಬರೆಯುವ ರೂಢಿಯೂ ಇದೆ.]

ಮಟ್ಟೆತಾಳ

ಶಂಕರಾಭರಣ

೩ ೩ ೩ ೩ ೩ ೩ ೩ ೩
ಶೂರ . ತಾನ . ವೀಸ . ರಥನ | ನೇರಿ . ಬಳಿಕ . ಪಾರ್ವ . ತೀಕು |

೩ ೩ ೩ ೩ ೩ ೩ ಗು
ಮಾರ . ಗೆಜ್ಜೆ . ಕಣೆಯ . ದಿಶೆಯು | ತೋರ . ದಂಡ . ದಿಽ ||

ಪಂಚಘಾತತಾಳ

೩ ೩ ೩ ೩ ೩ ೩ ೩ ೩
ಏನ . ನೆಂಬೆ . ದಾನ . ವೇಂದ್ರ | ಸೂನು . ಖತಿಯೊ . ಳಂಗ . ದಾದಿ |

೩ ೩ ೩ ೩ ೩ ೩ ಗು
ಪಾನ . ರರೊಳು . ಸಂಗ . ರಕ್ಕೆ | ತಾನೆ . ನಿಂದ . ನುಽ ||

೩ ೩ ೩ ೩ ೩ ೩ ೩ ೩
ಆನು . ವವರ . ದಾರು . ಮಿಗೆನ | ಮೀನ ಶರಗ . ಳಿಂದ . ಲವರ |

೩ ೩ ೩ ೩ ೩ ೩ ಗು
ಮಾನ . ಗುಂದಿ . ಸಿದನು . ಹವದೊ | ಳಾನಿ . ಶಾಟ . ನುಽ ||

ಸಾವೇರಿ

೩ ೩ ೩ ೩ ೩ ೩ ಗು
ದ್ವಿಜ . ಪತಿಯು . ಬೀಳೆ . ಕಂಡು . ರವಿಕು . ಮಾರ . ನುs ||

೩ ೩ ೩ ೩ ೩ ೩ ಗು
ದ್ವಿಜ . ವೈರಿ . ಯೊಡನೆ . ಕಾದಿ . ಬವಣೆ . ಗೊಂಡ . ನುs ||

೩ ೩ ೩ ೩ ೩ ೩ ಗು
ಅವನ . ಹರಿಬ . ಕೆಂದು . ಬಂದು . ಪವನ . ಮಿತ್ರ . ನುs ||

೩ ೩ ೩ ೩ ೩ ೩ ಗು
ಬವರ . ಕೊಟ್ಟು . ರಣದಿ . ಕಾದಿ . ಮೂರ್ಛೆ . ಗೊಂಡ . ನುs ||.

(ಎರಡು ಪಾದಗಳಿಗೆ ಒಂದು ಪದ್ಯವೆಂದು ಎಣಿಸುವ ಕ್ರಮವಿದೆ.)

ದೇಶಿ

೩ ೩ ಗು ೩ ೩ ಗು
ನಿಲ್ಲು . ನಿಲ್ಲೆ . ಲೋs | ಖುಲ್ಲ . ದಾನ . ವs ||

೩ ೩ ೩ ೩ ೩ ೩ ಗು
ಬಲ್ಲಿ . ದಗನು . ಗೆಲಿದ . ಗರ್ವ | ವಿಲ್ಲಿ . ತೋರಿ . ಸುs || .

ಭೈರವಿ

೩ ೩ ಗು ೩ ೩ ೩ ಗು
ಎನಲು . ಕೇಳು . ತs || ಮನದಿ | ಕಿನಿಸು . ತಾಳು . ತs ||

೩ ೩ ೩ ೩ ೩ ೩ ಗು
ಘನತ . ರಾಸ್ತ್ರ . ದಿಂದ . ಲೆಚ್ಚ | ದನುಜ . ಗಜರು . ತs ||.

ಕಾಂಬೋಧಿ

೩ ೩ ೩ ೩ ಗು ಗು ೩ ೩
ಆರೆ . ಲೋ ಮ . ದಾಂಧ . ವೀರ . ನೇs || ನಿ . ನ್ನದಟು . ತನವ |

೩ ೩ * ೩ ೩ ಗು ೩ ೩ ೩
ತೋರೆ . ಲಾಯೆ . ನ್ನೊಡನೆ . ಘಮ್ಮ . ನೇs || ಭೂರಿ . ಶೌರ್ಯ . ದಿಂ

೩ ೩ ೩ ೩ ೩ ೩ ೩ ೩
ವ . ರೂಥ | ವೇರಿ . ಮುಂದೆ . ಬರುವ . ಸಮರ | ಶೂರ . ನಿನ್ನ . ಪೆಸರ .

೩ ೩ ೩ ೩ ೩
ದಾವು | ದಾರ . ತರಳ . ನೆಂಬು . ದರುಹು || .

ತುಜಾವಂತು

ಲ ಲ ಲ ಲ ಗು
ಆರೆ . ಲೋ ಮ . ದಾಂಧ . ವೀರ . ನೇ ॥ ಪಲ್ಲವಿ ॥

ಲ ಲ ಲ ಲ ಲ ಲ ಲ ಲ
ಚೋರ . ರಂತೆ . ಮಾರ್ಬ . ಲಗಳ । ಸೇರಿ . ಬಂದು . ಪಟ್ಟ . ಣವ ವಿ ।

ಲ ಲ ಲ ಲ ಲ ಲ ಲ ಲ
ಚಾರ . ವೆಸಗ . ಬಿಂತು . ಮುತ್ತಿ । ಗಾರು . ಗೈವೆ . ಭಳಿರೆ . ಯಿಂಥ ।

ಲ ಲ ಲ ಲ ಗು ಗು ಲ ಲ
ಪಾರು . ಪತ್ಯ . ಕೊಟ್ಟ . ರಾರೆ . ಲಾ ॥ ನೋ . ಡಲ್ಕೆ ಭಸ್ಮ ।

ಲ ಲ ಲ ಲ ಗು ಗು ಲ ಲ
ಧಾರಿ . ಯೆನಿಪ . ಶೈವ . ನೇನೆ . ಲಾ ॥ ರು . ದ್ರಾಕ್ಷಿ . ಗಳದಿ ।

ಲ ಲ ಲ ಲ ಗು
ಹಾರ . ಗೈದೆ . ಧೀರ . ನಹೆ ಭ . ಲಾ ॥ .

ಅಹೇರಿ

ಲ ಲ ಲ ಲ ಗು
ಬಂದ . ನಾಗ . ಭಾನು . ಕೋಪ . ನು ॥ ಪಲ್ಲವಿ ॥

೬ ಲ ಲ ಲ ಲ ಲ ಲ
ಸ್ಕಂದನನೇ.ರುತ್ತ.ದೈತ್ಯ।ವೃಂದ.ದೊಡನೆ.ಸಮರ.ಕೆನುತ ॥ಅನುಪಲ್ಲವಿ॥

ಲ ಲ ಲ ಲ ಲ ಲ ಲ ಲ
ಖಳ ಮಹೀಶ . ವಿಜಯ . ಖರನು । ಕಲಿವಿ . ಮೋಹ . ಕಾಖ್ಯ . ನುಗ್ರ ।

ಲ ಲ ಲ ಲ ಲ ಲ ಲ ಲ
ಕಳಭ . ವಿಷ್ಣ . ಸೇನ . ಮುಖ್ಯ । ದಳಪ . ತಿಗಳ . ಕೂಡಿ . ಶಸ್ತ್ರ ।

ಲ ಲ ಲ ಲ ಲ ಲ ಲ ಲ
ಗಳನು . ಧರಿಸಿ . ಧನುವ . ನಾದ । ಗೊಳಿಸಿ . ಬಳಿಸಿ . ಗಜರ . ಥಾಶ್ವ ।

ಲ ಲ ಲ ಲ ಲ ಲ ಲ ಲ
ವುಳಿಸಿ . ಪಿಂಡೆ . ಪವನ . ನನ್ನ । ಕಳಿದು . ತುಳಿದು . ಧರೆಯು . ರಣಕೆ ॥

ಸುರಟಿ

ಳ ಳ ಗು ಳ ಳ ಗು
ಭಳಿ ಭಳಿ . ರಿಲೆ ವೀ . ರಽ ॥ ಕೊಳುಗುಳ . ದೊಳು ಶೂ . ರಽ ॥

ಳ ಳ ಳ ಳ ಳ ಗು
ತಿಳಿದೆನು . ನಿಲುನಿಲು . ಗರ್ವವ । ನಿಳುಹುವೆ . ನು ಕುವಾ . ರಽ ॥ ಪಲ್ಲವಿ ॥

ಳ ಳ ಳ ಳ ಳ ಗು
ಖಡುಗವು . ಪ್ರೋಗ . ಲ್ಕೇನ್ ಘನ । ವಿಡಿದಿಹ . ಗದೆಯಿಂ . ದಽ ॥

ಳ ಳ * ಳ ಳ ಳ ಗು
ಹೊಡೆದ . ಪ್ಪಳಿಸುವೆ . ಕ್ಷಣದೊಳು । ಹುಡುಗನೆ . ಯೆನಲಿಂ . ದಽ ॥ .

ಝಂಪೆ ತಾಳ

ಭೈರವಿ

೫ ೫ ೫ ೫
ಎಂತು ಬ . ಣ್ಣಿಪೆನರಸ । ಕೌಂತೇಯ . ರಿಹ ಸಿರಿಯ ।

೫ ೫ ೫ ೨ ಗು
ಸಂತಸವ . ಬಣ್ಣಿಸಲ । ನಂತಗಸ . ದಳವ್ರಽ ॥ .

ಕಾಂಬೋಧಿ

೫ ೫ ೫ ೫
ಭೂಮಿಪತಿ . ಕೇಳ್ ನಿನ್ನ . ಕಾಮಿನಿಯು . ಪೆತ್ತ ಗಜ ।

೫ ೫ ೨ ಗು
ಗಾಮಿನಿಯ . ಬೆಡಗನಾ . ತಿಳಿದುಽ ॥

೫ ೫ ೫ ೫
ಕಾಮಿಸಿಹೆ . ನದರಿಂದ . ಸೋಮಪ್ರಭೆ . ಯನು ಕೊಟ್ಟು ।

೫ ೫ ೨ ಗು
ಪ್ರೇಮದಿಂ . ವೈವಾಹ . ವೆಸಗುಽ ॥ .

ಮಾರವಿ

೫ ೫ ೫ ೫
ಅಣ್ಣ ಕೇಳ್ . ಸೌಭದ್ರೆ . ಬಣ್ಣದಿಂ . ದೆನ್ನೊಡನೆ ।

೫ ೫ ೫ ೨ ಗು
ಹಣ್ಣಿದಳು . ಧುರವ ಮು . ಕ್ಕಣ್ಣನಂ . ದದೊಳುಽ ||
೫ ೫ ೫ ೫
ಮಿಣ್ಣನಾ . ಕೆಯು ಗರ್ವ . ಮಣ್ಣಗೂ . ಡಿಸಿದೆನಿದ |
೫ ೫ ೫ ೨ ಗು.
ನೆಣ್ಣದಿರು . ಮನದಿ ಪೂ . ಗಣ್ಣಪಿಂ . ತೆರಳುಽ ||.

ಕಲ್ಯಾಣಿ

೫ ೫ ೫ ೨ ಗು .
ಬಿಸಜ ಗಂ . ಧಿನಿ ನಿನ್ನ ಪೆಸರೇನು . ಪೇಳೇಽ ||
೫ ೫ ೫ ೨ ಗು
ಶಶಿಮುಖಿಯೆ . ಪೆತ್ತವರ . ನುಸುರುಗುಣ . ಶೀಲೇಽ ||
೫ ೫ ೫ ೨ ಗು
ಕುಸುಮಲೋ . ಚನೆ ಮನಸು , ಕದಡಿಹುದು . ಕೇಳೇಽ ||
೫ ೫ ೫ ೨ ಗು
ಪೊಸ ಯೌವ . ನಾಂಗಿ ನೀ . ಸಲಹೆನ್ನ . ಬಾಲೇಽ ||.

[ಎರಡು ಪಾದಗಳನ್ನೇ ಒಂದು ಪೂರ್ಣ ಪದ್ಯವಾಗಿ ಬರೆಯುವ ಕ್ರಮವೂ ಇದೆ.]

ಕೇದಾರ ಗೌಳ

೫ ೫ ಗು ೫ ೫ ೫
ಚಿತ್ತವಿಸು . ಧಿಷಣ ವ . ರ್ಯಽ || ನಿನ್ನೊಡನೆ | ಬಿತ್ತರಿಪೆ . ನೊಂದು
ಗು ೫ ೫ ೫
ಕಾ . ರ್ಯಽ || ಪೆತ್ತಯ್ಯ . ಗೆಣೆಯು ನೀ . ನುಽ || ತವ ಮನೋ |
೫ ೫ ಗು
ವೃತ್ತಿಯನು . ಪೇಳ್ವದಿ . ನ್ನುಽ ||.

ತುಜಾವಂತು

೫ ೫ ೫ ೨ ಗು
ಮತಿಮರೆಯ . ದಿರು ರಣದಿ | ಸತತ ಛಲ . ಮನದಿಽ ||
೫ ೫ ೫ ೨ ಗು
ಖತಿಯಿಂದ . ವೈರಿಗಳ . ಜತೆಗೆಳಸೆ . ಜಗಳಽ || ಪಲ್ಲವಿ ||

೫ ೫ ೫ ೫
ಶರಣ್ಣನು . ರಕ್ಷಿಸುತ . ದುರುಳರನು . ಶಿಕ್ಷಿಸುತ |
೫ ೫ ೫ ೨ ಗು
ಅರಿಗಳೊಡ . ನತಿಧೈರ್ಯ . ಧರಿಸುವುದು . ಶೌರ್ಯಽ ||
೫ ೫ ೫ ೫
ಮುರಹರನ . ಪಾದವನು . ನೆರೆನಂಬು . ಧರ್ಮವನು |
೫ ೫ ೫ ೨ ಗು
ತೊರೆಯದಿರು . ಹಮ್ಮಿನೊಳು . ತರಳ ನೀ . ಬಾಳುಽ || -

ಮುಖಾರಿ

೫ ೫ ೫ ೨ ಗು .
ಚಿಂತೆಯೇ . ಕೆಲೆ ಪ್ರಾಣ . ಕಾಂತ ಬರಿ . ದೇಽ ||
೫ ೫ ೫ ೫
ಕಂತು ವೈ . ರಿಯನೇಮ . ದಂತರವಿ . ದಿಂತಿರಲು || ಪಲ್ಲವಿ ||
೫ ೫ * ೫ ೫
ನೀರ ನಿ . ಸ್ನನು ವ್ಯರ್ಥ ದೂರಿ ಫಲ . ವೇನಿಹುದು |
೫ ೫ ೫ ೨ ಗು
ಘೋರ ರಾ . ಕ್ಷಸಿಯೊಳವಿ . ಚಾರವೇ . ನಿಹುದುಽ ||
೫ ೫ ೫ ೫
ವಾರಿಜಾ . ಸನನ ಕೈ . ಯೂರಿಕೆ ಚಮತ್ಕೃತಿಯು |
೫ ೫ ೫ ಗು
ಧಾರಿಣಿಯೊ . ಳಿಂತಿದನು . ಮೀರಬಹು . ದುಽ ||

ನೀಲಾಂಬರಿ

೫ ೫ ೨ ಗು ೫
ಹಾ ಕುಮಾ . ರಕ ಸಮರ . ಶೂರಽ || ಸಚ್ಚರಿತ |
೫ ೫ ೫ ೨ ಗು
ಶ್ರೀಕಾಂತ . ಭಕ್ತಶರ . ನಿಧಿ ಸಮಗ . ಭೀರಽ ||
* ೫ ೫ ೨ ಗು ೫
ಲೋಕ ಮೂ . ರರೊಳುನಿನ . ಗೆಣೆಯೋ? || ರಾಕ್ಷಸಾ |

೫ ೫ ೫ ೨ ಗು
ನೀಕದೊಳ . ಗೆನ್ನ ಸ . ನ್ಮೋಹನದ . ಕಣಿಯೋಽ ॥

* [ಮೂರನೆಯ ಪಾದವನ್ನು ಬಿಟ್ಟು, ಉಳಿದ ತ್ರಿಪಾದಗಳಿಂದ ಕೂಡಿರುವ ಪದ್ಯಗಳೂ ಇವೆ.]

ನಾಟಿ

೫ ೫ ೫ ೫
ಜಯ ಜಾನ . ಕೀ ಕಾಂತ . ಜಯ ಸಾಧು . ಗುಣವಂತೆ ।

೫ ೫ ೫ ೨ ಗು
ಜಯತು ಮಹಿ . ಮಾನಂತ . ಜಯ ಭಾಗ್ಯ . ವಂತಽ ॥

೫ ೨ ಗು
ಜಯ ಜಯತು . ಜಯ . ತುಽ ॥ ಪಲ್ಲವಿ ॥

೫ ೫ ೫ ೫ ೫
ದಶರಥಾ . ತ್ಮಜ ವೀರ . ದಶಕಂಠ . ಸಂಹಾರ ! ಪಶುಪತಿಯ .

೫ ೫ ೨ ಗು ೫ ೫
ವರಮಿತ್ರ . ಪಾವನ ಚ . ರಿ . ತ್ರಽ ॥ ಕುಸುಮ ಸಾ . ಯಕ

೫ ೫ ೫ ೫
ರೂಪ . ಕುಶಲ ಕೀ . ರ್ತಿಕಲಾಪ । ಅಸಮ ರಾ . ಕ್ಷಸಶಿಕ್ಷ .

೫ ೨ ಗು ೫ ೨ ಗು
ಅಂಬುಜದ . ಳಾ . ಕ್ಷಽ ॥ ಜಯ ಜಯತು . ಜಯ . ತುಽ ॥

[ಪಲ್ಲವಿಯ ಚರಣಗಳನ್ನೇ ಪೂರ್ಣ ಪದ್ಯವಾಗಿ ಬರೆಯುವ ಕ್ರಮವಿದೆ.]

ತೋಡಿ

೫ ೫ ೫ ೨ ಗು
ಜಯ ಜಯ ಮ . ಹೀಪತೇ . ದಶರಥ ನೃ . ಪಾ . ಲಽ ॥ ಪಲ್ಲವಿ ॥

೫ ೫ ೫ ೫
ಕ್ಷೇಮವೇ . ನೃಪತಿಲಕ . ಪರಿವಾರ . ಗಳಿಗೆಲ್ಲ ।

೫ ೫ ೫ ೨ ಗು
ರಾಮ ಲ . ಕ್ಷಣರುಗಳು . ಬಂದರೇ . ಪುರ . ಕೆಽ ॥

ದ್ವಿಜಾವಂತಿ

ಌ ಌ ಌ ಗು
ಕ್ಷೇಮವೇ . ಮೈರಾವ . ಣಾಖ್ಯ ನಿನ . ಗೇ ||

ಌ ಌ ಌ ೨ ಗು
ಕಾಮಿನಿಯು . ಸಂಧ್ಯೆ ಪರಿ . ಣಾಮದಿಂ . ದಿ ಹಳೇ ? || ಪಲ್ಲವಿ ||

ಌ ಌ ಌ ಌ
ಪುರಜನರು . ಪದುಳಿಗರೆ . ಪರಿಜನರು . ಕುಶಲಿಗರೆ |

ಌ ಌ ಌ ಗು
ಧರೆಯೆಲ್ಲ . ನಿನ್ನ ಕೈ . ಸೇರಿರ್ಪು . ದೇಽ ||

ಌ ಌ ಌ ಌ
ಉರಗಪತಿ . ಯವನಿಯನು . ಸಾಧಿಸಿದೆ . ಯಾಬಳಿಕ |

ಌ ಌ ಌ ೨ ಗು
ಸುರರ ಪರಿ . ಯನು ಮಾತಿ . ಗೆರವಿಲ್ಲ . ದಿಹ . ರೇಽ ||

ಅಹೇರಿ

ಌ ಌ ಌ ಌ
ಶ್ರೀ ಕೃಷ್ಣ . ನಿಗೆ ಕಮಲ . ನಾಭನಿಗೆ . ಗಿರಿಧರಗೆ |

ಌ ಌ ಌ ಗು
ಲೋಕಪಾ . ಲಕ ದೇವ . ಕೀ ಬಾಲ . ಗೆಽ ||

ಌ ಌ ಌ ಌ
ಪಾಕಶಾ . ಸನ ಮುಖ್ಯ . ದಿವಿಜಗಣ . ರಕ್ಷಕಗೆ |

ಌ ಌ ಌ ಗು
ಕಾಕುತ್ಸ್ಥ . ನಿಗೆ ವಿಮಲ . ವನಮಾಲ . ಗೆಽ ||

ಌ ಌ ಌ ಗು
ಜಯ ಮಂಗ . ಳಂ ನಿತ್ಯ . ಶುಭ ಮಂಗ . ಳಂ ||

ತ್ರಿಪುಟೆ ತಾಳ

ಸೌರಾಷ್ಟ್ರ

೩ ೪ ೩ ೪
ತರುಣಿ . ದೇವಕಿ . ಯುದರ . ದೊಳು ಹರಿ ।

೩ ೪ ೩ ೪
ಯಿರದೆ . ನೆಲಸಿದ . ನೀನ . ನೆಂಬೆನು ।

೩ ೪ ೩ ೪ ೩ ೨ ಗು
ಪರಮ . ಪುರುಷನ . ಮಹಿಮೆ . ಯನು ಕೇ । ಳ್ಧರಣಿ . ಪಾ . ಲಽ ॥

ಮಧುಮಾಧವಿ

೩ ೪ ೩ ೪
ಧರೆಯ . ಸಾಮದಿ . ಕೊಡೆನು . ಸಂಗರ ।

೩ ೪ ೩ ೪
ವಿರಚಿ . ಸುವೆಸೆಂ . ದೆನುತ . ಚಿನ್ಮಯ ।

೩ ೪ ೩ ೪
ಗರುಹಿ . ಕಳುಹಿದೆ . ನೀನು . ಮುಂದಿನ ।

೩ ೪ ೩ ಗು
ಪರಿಯ . ನರಿಯದೆ . ತರಳ . ನೇಽ ॥

೧ ಮಧ್ಯಮಾವತಿ

೩ ೪ ೩ ೪
ಪಾಹಿ . ಗೌರೀ . ತನಯ . ಶುಭಕರ ।

೩ ೪ ೩ ೪
ಪಾಹಿ . ನತಮಂ . ದಾರ . ಭಯಹರ ।

೩ ೪ ೩ ೪
ಪಾಹಿ . ಭವವದ . ನಾಬ್ಜ . ದಿನಕರ ।

೩ ೪ ೩ ಗು ೩ ೨ ಗು
ಪಾಹಿ . ಶರಜಪ . ರಾತ್ಪ . ರಽ ॥ ಪಾಹಿ . ಪಾಹಿ .

೨ ಮಧ್ಯಮಾವತಿ

೩ ೪ ೩ ೪
ವೀರ . ದಶರಥ . ನೃಪತಿ : ಯಿನಕುಲ ।
೩ ೪ ೩ ಗು
ವಾರಿ . ಧಿಗೆ ಪ್ರತಿ . ಚಂದ್ರ . ನುಽ ॥
೩ ೪ ೩ ೪
ಧಾರಿ . ಣಿಯನಾ . ಳುತಿರೆ . ಕುಶಿಕ ಕು ।
೩ ೪ ೩ ಗು ೩ ೨ ಗು
ಮಾರ . ರನು ಕರೆ . ದೊಯ್ದ . ನುಽ ॥ ಯಜ್ಞ . ಕೆಂ . ದುಽ ॥

ಶಂಕರಾಭರಣ

೩ ೪ ೩ ೪ ೩ ೪ ೩ ಗು
ತೊಟ್ಟೆ . ತೊಡಿಗೆಯ . ನೆಲ್ಲವನು ತೆಗೆ । ದಿಟ್ಟು . ಕಡೆಗಾ . ಮಾನಿ . ನಿಽ ॥
೩ ೪ ೩ ೪ ೩ ೨ ಗು
ಇಟ್ಟೆ . ಕಸ್ತುರಿ . ತಿಲಕ . ವನು ಕೈ । ಗೊಟ್ಟು . ಕೆದ . ರಿಽ ॥ .

ತೋಡಿ

೩ ೪ ೩ ೪ ೩ ೪ ೩
ಕೇಳು . ನೃಪ ಕೆಲ . ವಿಹುದು ನಿನ್ನೊಳು । ಪೇಳ . ತಕ್ಕುದು . ಬಂದೆ .
೪ ೩ ೪ ೩ ೪ ಗು ೩ ೪
ನದರಿಂ । ಪೇಳು . ವೆನು ನಿ . ನ್ನಂತ . ರಂಗದ . ಲಿಽ ॥ ಆಳು . ವಿರಿ ಹರ .
೩ ೪ ೩ ೪ ೩ ೪ ೩
ನಾಜ್ಞೆ . ಯಿಂದಲಿ । ಲೋಲ . ಲೋಚನೆ . ಯೊರ್ವಳನುಃ ನೀ । ವಾಲಿ .
೪ ೪ ೪ ಗು
ಸಿಂದಿ . ನ್ನಿಹುದು . ಮತ್ತ . ಲ್ಲಿಽ ॥ .

ಭೈರವಿ

೩ ೨ ಗು ೪ ೩ ೨ ಗು
ಪೊರಟ . ರಾಗಃ ॥ ಯುದ್ಧಕೆ । ಪೊರಟ . ರಾಗಃ ॥ ಪಲ್ಲವಿ ॥

೩ ೪ ೩ ೪ ೩ . ೪ ೩ ೪
ತರುಣಿ . ಭಾವಮಾ . ದೇವಿ . ಸಹಿತಲೆ । ತರಣಿ . ಕೋಟಿಪ್ರ . ಕಾಶ . ಡಿಂಪಲಿ ।

೩ ೪ ೩ ೪ ೩ ೪ ೩ ೪
ಗರುಡ . ದೇವನ . ಮೇಲೆ . ರಂಜಿಪ । ಪರಮ . ಪುರುಷನ . ಕಂಡು . ಬೇಗದಿ ।

೩ ೪ ೩ ೪ ೩ ೪ ೩
ನರಕ . ದಾನವ . ನುಗ್ರ . ಕೋಪದೊ । ಳುರಿಯ . ಸೂಸುತ . ನೇತ್ರ .

೪ ೩ ೪ ೩ ೪ ೩ ೪
ಯುಗ್ಮದಿ । ಮುರನ . ಗೆಲಿದಿಹ . ಗರ್ವ . ವನು ತಾ । ಮುರಿವೆ . ನೆಂದಡಿ .

೩ ೪
ಯಿಡಲು . ತವಕದಿ ॥ ಪೊರಟರಾಗಃ ॥

೨ ಭೈರವಿ

೩ ೨ ಗು ೪ ೩ ೨ ಗು
ಬಂದಳಾಗಃ । ಪೂತನಿ । ಬಂದಳಾಗಃ ॥ ॥ ಪಲ್ಲವಿ ॥

೩ ೪ ೩ ೪
ಮಂದ . ಮತಿ ಕಂ . ಸಾಖ್ಯ . ನಾಜ್ಞೆಯೊ ।

೩ ೪ ೩ ೪
ಳಂದು . ಶಿಶುಗಳ . ಕೊಂದು ಕೂಗುತ ॥ ಅನುಪಲ್ಲವಿ ॥

೩ ೪ ೩ ೪ ೩ ೪ ೩ ಗು
ಅಸುರ . ಭಾವವ . ಮರೆಸಿ . ನಡುವಿನೊ । ಳೆಸೆವ . ಸೀರೆಯ . ನುಟ್ಟು . ಳಾಃ ॥

೩ ೪ ೩ ೪ ೩ ೪ ೩ ಗು
ಬಿಸಜ . ಕೋರಕ . ಕುಚಕೆ . ಕುಪ್ಪಸ । ಹೊಸೆದು . ಹೊಂದಿಸಿ . ತೊಟ್ಟು . ಳಾಃ ॥

೩ ೪ ೩ ೪ ೩ ೪ ೩ ಗು
ನೊಸಲಿ . ಗಮರುವ . ದಿವ್ಯ . ಕಸ್ತುರಿ । ಯೆಸೆವ . ನಾಮವ . ನಿಟ್ಟು . ಳಾಃ ॥

೩ ೪ ೩ ೪ ೩ ೪ ೪
ಕುಸುಮ . ಶರನರ . ಗಿಣಿಯ . ರೀತಿಯೊ । ಳೊಸಗೆ . ಮಿಗೆ ರಂಜಿಸುತ . ಬೇಗದಿ ॥

[ಅನುಪಲ್ಲವಿ ಇಡದೆ ಬರೆಯುವ ಕ್ರಮವೂ ಇದೆ.]

ಯಮುನಾ ಕಲ್ಯಾಣಿ

ಇ ಳ ಇ ಳ ಇ ಳ ಇ ಗು
ಮಂಗ . ಳಂ ಜಯ . ಮಂಗ . ಳಂ ಶುಭ । ಮಂಗ . ಳಂ ಮಹ.ಲಿಂಗ. ಗೆಽ॥

ಇ ಳ ಇ ಳ ಇ ಳ ಇ ಗು
ಅಂಗ.ಜಾರಿಭು.ಜಂಗ.ಭೂಷ ಸಿ।ತಾಂಗ.ಕರುಣಾ.ಪಾಂಗ. ಗೆಽ ॥ಪಲ್ಲವಿ॥

ಇ ಳ ಇ ಳ ಇ ಳ ಇ ಗು
ನೀಲ . ಕಂಧರ . ಶೂಲ . ಧರ ಶಿರ । ಮಾಲ . ಗಿರಿಜಾ . ಲೋಲ . ಗೆಽ ॥

ಇ ಳ ಇ ಳ ಇ ಳ ಇ ಗು
ಕಾಲ . ಕಾಲ ಕಪಾಲ . ಭೃದ್ಗಣ । ಪಾಲ . ತ್ರಿಗುಣಸು . ಶೀಲಗೆಽ ॥

ಆದಿ ತಾಳ

ನೀಲಾಂಬರಿ

ಳ ಗು ಳ ಗು ಳ ಗು ಳ ಗು
ಹಾರವು . ಣೀತ . ಶುಕಗಾ . ನೇಽ ॥ ಬಾರೇ . ವಾ . ರಣಯಾ . ನೇಽ ॥

ಳ ಗು ಳ ಗು ಳ ಗು ಳ ಗು
ನಾರೀ . ಬೇಸರವೇ . ನುಽ ॥ ದೂರುವೆ . ಯಾ . ಗುಣಧೇ . ನುಽ ॥

ಕೊರವಿ

ಳ ಳ ಳ ಳ
ಬಾರೆ . ನ್ನಯ ಸುಕು . ಮಾರ ಕು . ಮಾರ ಸ।

ಳ ಳ ಇ ಗು ಳ ಳ
ಮೀರ ಬ . ಲಾನ್ವಿತ . ಸುಂದರೆಽ ॥ ವೀರ ಉ . ದಾರ

ಇ * ಇ ಳ ಳ ಇ ಗು
ಮ . ಯೂರಸ್ಯಂದನು ಸು । ಧಾರೆಸ . ನಿಧಿಗುಣ . ಚಂದಿರೆಽ ॥

ಸುರುಟಿ

ಳ ಳ ಗು ಳ ಳ ಳ ಗು
ಆರತಿ.ಬೆಳಗಿದ. ಳುಽ ॥ ಮುನಿಪಗೆ। ನಾರಿಯು . ಭಕ್ತಿಯೊಳುಽ ॥ಪಲ್ಲವಿ॥

ಲ ಲ ಗು ಲ ಲ ಲ ಗು
ಚಿನ್ನದ . ಬಟ್ಟಲ . ಲಿs ॥ ತುಂಬುತ । ರನ್ನ ಘ . ಲಂಗಳ . ಲಿs ॥
ಲ ಲ ಗು ಲ ಲ ಲ ಗು
ಎಣ್ಣೆ ಕ . *ಪೂರ್ರದ . ಲಿs ॥ ಗುಣಸಂ । ಪನ್ನಗೆ ಹರ್ಷದ . ಲಿs ॥

ಏಕ ತಾಳ

ಆಯರ್ಾ ಸವಾಯರ್

ಲ ಲ ಲ ಲ ಲ ಲ
ದುರುಳೆಯು . ತಾನೀ . ಪರಿಮನ . ದೊಳು ಪರ । ಪುರುಷನ . ಬಯಸುತ .
ಲ ಗು ಲ ಲ ಲ ಲ
ಮರನೆಡೆ . ಯೆs ॥ ಕ್ರೂರೆದಾ . ಕ್ಷಣ ಶಚಿ . ಯರಸ . ಲ್ಕೆನ್ನುತ ।
ಲ ಲ ಲ ಗು
ಪೊರಟ್ಟೆ . ತಂದಳು . ಮುಂಗಡೆ · ಯೆs ॥ .

ಸವಾಯರ್ ಜಂಗಲ್

ಲ ಲ ಲ ಲ ಲ ಲ ಲ
ಎಲವೆಲ . ವೋಭೀ . ನೃಪಕುಲ · ಕುನ್ನಿಯೆ । ಕಳೆವಿನ ಜೂಜಾ . ಡುವ
ಗು ಲ ಲ ಲ ಲ ಲ
ಬಾ . ರೈ ॥ ಸಲಿಲದೊ . ಳೀತಕೆ . ಸುಮ್ಮನೆ . ಮುಳುಗಿಹೆ । ಸುಲಿಸ್ವೈ .
ಲ ಲ ಲ
ದ್ರುಪದಜೆ . ಯುಂಬರ . ಫಡ ಫಡ ॥ .

ಮಾರವಿ

ಲ ಲ ಲ ಲ ಲ ಲ ಗು
ತಾತನೆ . ಕೇಳ್ ನೀ . ನೇತಕೆ ಪೊರಡುವ । ದಾತರ . ಳೆಯ ತರ.ಲುs ॥
ಲ ಲ ಲ ಲ ಲ ಲ ಗು
ಮಾತೆನ . ಗಿತ್ತರೆ . ನಾ ತರು . ವೆನು ಸುರ । ನಾಥನ . ದೆಸೆಗೆಡಿ . ಸಿs . ॥

ಮಾರವಿ ಅಷ್ಟಪದಿ

ಳ ಳ ಳ ಳ ಳ ಳ
ಲಾಲಿಸು . ವಿದುರ ವಿ । ಶಾಲ ತ್ರಿ . ಣೇತ್ರ ಕ । ರಾಳನ . ಯನ ದಂ ।

ಳ ಳ ಳ ಳ ಳ ಳ
ಷ್ಟ್ರಾಳಿಯ . ಸಾವಿರ । ತೋಳಿನೊ . ಳಾಯುಧ । ಜಾಲಕ . ಪಾಲದ ।

ಳ ಳ .ಳ ಳ ೨ ಗು ೨ ಗಂ .
ಮಾಲೆಯ . ಬಹಳ । ಜ್ವಾಲೆಯ . ಬೀರುತ । ನಿಂದS . ನಾಗS ॥

ಸುರುಟಿ

ಳ ಳ ಗು ಳ ಳ ಳ ಗು
ಕೇಳನಿ . ವಿುಪರೊಡೆ . ಯುS ॥ ನಿನ್ನೊಳು । ಪೇಳುವೆ . ವೀನುಡಿ . ಯುS ॥

ಳ ಳ ಳ ಳ ಳ ಳ
ಖೂಳಖ . ಳರ ಜಯ . ಡೇಳಿಗೆ . ಯೇನಿದು । ಭಾಳನ . ಯನನವ .

ಳ ಳ
ರಾಳಾ . ಗಿಹನೇ ॥

ಸುರುಟಿ

೩ ೫ ಗು ಲ ಗು ಗು
ಗಮನ . ವೆತ್ತಪೇ . ಳುS ॥ ಕೃ . ಪಾಳುS ॥

೩ ೫ ಗು
ಗಮನ . ವೆತ್ತ ಪೇ . ಳುS ॥ ಪಲ್ಲವಿ ॥

೩ ೫ ೫ ಳ
ಗಮನ . ವೆತ್ತ ಪೇ । ಳಮರ ಮು . ನಿಪ ಭೂ ।

೩ ೫ ಳ ಳ
ರಮಣ . ರೆಂತಿಹರು । ಶ್ರಮವೇ . ನಧಿಕS ॥ .

ನವರೋಜು

ಳ ಗು ಳ ಗು ೨ ಳ ಗು ಳ
ಅಮ್ಮ . ಯ್ಯಾ . ಬಿಡುದುಗು . ಡS ॥ ನೀ । ಸುಮ್ಮನೆ . ಯೋ . ಚಿಸ

ಗು ೪ ೪ ೪ ೪
ಬೇ . ಡಽ ‖ ಬೊಮ್ಮನ . ನಮರರ . ನೊಮ್ಮೆಗೆ . ಗಣಿಪೆನೆ ।

೪ ೪ ೪ ೪
ಘಮ್ಮನೆ . ಭೂಪನ . ಹಮ್ಮನು . ನಿಲಿಸುವೆ ‖

ಭೈರವಿ

೪ ೪ ೨ ಗು ೨ ೪. ೪ ೨ ಗು
ಎಲವೋ . ಸೂತನ . ಮಗನೇಽ ‖ ನೀ । ಕಲಹದೊ . ಳತಿ ಸಹ . ಸಿಗನೇಽ‖

೪ ೪ ೨ ಗು ೨
ತಲೆಯನು . ನೀಗಲಿ . ಕಹುದೋಽ ‖ ಮೋಽ್ ।

೪ ೪ ೨ ಗು
ಮಲೆತರೆ . ಕಾಣಲು . ಬಹುದೋಽ ‖ .

ಬೇಗಡೆ

೩ ೪ ೩ ೪ ಗು ೨ ೩
ವಂದಿ . ಸುವೆ ಗುಣ . ವೃಂದ . ಮುನಿ ತಿಲ . ಕಽ ‖ ಕ್ಷಮಿ . ಸುವುದು .

೪ ೩ ೪ ೩ ೪ ಗು
ತಪ್ಪುಗ । ಳೊಂದ . ನೆಣಿಸದೆ . ಚಂದ . ದಿಂಬಳಿ . ಕಽ

೩ ೪ ೩ ೪ ೩ ೪ ೩
ಎಂದ . ರೇನದ . ವಿಂದ . ಶರದುರಿ । ಯಿಂದ . ಬಹುಪರಿ . ನೊಂದು .

೪ ೩ ೪ ೩ ೪
ಬಳಲುತ । ಮುಂದು . ಗಾಣದೆ . ನಿಂದಿ . ರಲು ನಡೆ ।

೩ ೪ ೩ ೪
ತಂದೆ . ನೀನಾ . ನಂದ . ದಿಂದಲಿ ‖

ಬೇಗಡೆ

೩ ೪ ೩ ೪ ಗು
ಲಾಲಿ . ಸಲೆಸುರ . ಪಾಲ . ಕನೆ ನುಡಿ . ಯೆಽ ‖

೨ ೩ ೪ ೩ ೪ ೩ ೪ ಗು
ನಿ.ಸ್ನೆಡೆಗೆ . ಬಂದಿಹ।ಊಳಿ . ಗವನಾ.ಪೇಳು . ವೆನು ಜೀ . ಯೆಽ‖ ಪಲ್ಲವಿ ‖

ಇ ಲ ಇ ಲ ಇ ಲ ಇ
ಕಾಲ . ಗತಿಯಿಂದು . ಖೂಳ . ರಾಕ್ಷಸ । ರಾಲ . ಯುದೊಳವ . ರಾಳು .

ಲ ಇ ಲ ಇ ಲ
ತನಗಳ । ಕೇಳಿ . ಮನವಿದು . ತಾಳ . ಲರಿವುದೆ? ।

ಇ ಲ ಇ ಲ
ಭಾಳ . ನೇತ್ರಗೆ . ಮೇಲ . ರಕೆಗಳು ॥ ಅನುಪಲ್ಲವಿ ॥

ಇ ಲ ಇ ಲ ಇ ಲ ಗು
ವಾರಿ . ಧಿಯ ನಡು . ಸೇರಿ . ರಾಜಿಪ । ಧಾರಿ . ಣಿಯುನರಿ . ಯುಽ ॥

ಲ ಇ ಲ ಇ ಲ ಇ ಲ ಗು
ಮುತ್ತಾ । ಭೂರ . ಮಣನಹ . ಶೂರ . ಪದ್ಮನ । ಪಾರ . ಭೂಸಿರಿ . ಯುಽ ॥

ಲ ಇ ಲ ಇ ಲ ಇ ಲ ಗು
ವರ್ಣಿಸ। ಲಾರಿ. ಗಳವದು . ತೋರು . ವುದು ಗಂ। ಭೀರ. ಬಹುಪರಿ . ಯುಽ ॥

ಲ ಇ ಲ ಇ ಲ ಲ ಗು
ವಸುಮತಿ।ಗಾರೆ.ವಿಯೊ ಮೇ.ಣಾರೊ.ಜನ ಕಾ।ಧಾರಿ.ಯೆನೆ ಧೊರೆ.ಯುಽ ॥

ಲ ಇ ಲ ಇ ಲ ಇ ಲ ಇ
ನಗರದ।ಭೂರಿ . ವಿಭವವ . ಪೂರ. ವರಿವೊಡೆ। ಸ್ವಾರಿ . ಗೈಯಲು . ಘೋರ .

ಲ ಇ ಲ ಇ ಲ ಇ ಲ
ರಾಕ್ಷಸ । ವಾರ . ವಂದಿತ . ಕ್ರೂರ . ಕರ್ಮಿಯು । ಪೋರ . ತನದ ವಿ .

ಇ ಲ
ಚಾರ . ಕೃತ್ಯವ ॥ .

ಪಲ್ಲವಿ ಅನುಪಲ್ಲವಿಗಳನ್ನು ಇಡದೆ ಬರೆಯುವ ಕ್ರಮವೂ ಇದೆ.

ಧ್ರುವ ತಾಳ

ಕವಾಚು

ಲ ಲ ಲ ಗು ಎ ಗು
ಬಾರೋ . ಸಾರಸ . ದಳನಯ . ನಽ । ಬೇಗಾ ।

ಲ ಲ ಲ ಗು.
ಬಾರೋ . ಸಾರಸ ದಳನಯ . ನಽ ॥ ಪಲ್ಲವಿ ॥

ಳ ಳ ಳ ಳ
ನಾರಾ . ಯಣಪದ . ವಾರಿಜ . ಯುಗಳವ ।
ಳ ಳ ಳ ಳ
ಸೇರಿದೆ . ಶೋಕನಿ . ವಾರಣ . ಕಾರಣ ॥ ಅನುಪಲ್ಲವಿ ॥
ಳ ಳ ಳ * ಳ
ಹಾರವ ಮು . ಕುಟ ಕೇ . ಯೂರಕುಂ . ಡಲಯುತ ।
ಳ ಳ ತ್ರಿ ಗು . ಷ ಚ ಷ
ವಾರಿಜ . ನಕ ವ್ಯ . ದೋರೋ ॥ ನೀರ . ದೋರು ಶಾ . ರೀರ .
ಚ ಳ ಳ ತ್ರಿ ಗು
ಘೋರಭವ । ಪಾರಾ . ಯಣ ವುದ . ಬೀರೋ ॥

[ಈ ಪದ್ಯವು ಏಕ ತಾಳಕ್ಕೆ ಚೆನ್ನಾಗಿ ಹೊಂದಿಕೊಳ್ಳುವುದು]

ಅಂಶಗಣದ ಹಾಡುಗಳು

ಅಂಶಗಣದ ಪದ್ಯಗಳಲ್ಲಿ + ಈ ಚಿಹ್ನೆ ಹಾಕಿದ ಬ್ರಹ್ಮ ಗಣದಲ್ಲಿ ಎರಡೇ ಅಕ್ಷರಗಳಿದ್ದರೆ ಹಾಡಲು ಅನುಕೂಲವಾಗುವುದು ಈ ಗಣದ ಆದಿ ಅಕ್ಷರವು ಲಘುವಾಗಿದ್ದರೂ ಅದನ್ನು ಗುರುವಾಗಿಯೇ ಭಾವಿಸಬೇಕು.

ರೂಪಕ ತಾಳ

ಸಾಂಗತ್ಯ

ವಿ ವಿ ವಿ ವಿ
ವರದೆ ಶಂ . ಕರಿ ಪುಣ್ಯ . ಚರಿತೆ ಕೋ . ಮಲಗಾತ್ರೆ ।
ವಿ ವಿ ಬ್ರ
ಹರಿಣಲೋ . ಚನೆ ಚಂದ್ರ . ವಕ್ತ್ರೇ ॥
ವಿ ವಿ ವಿ ವಿ
ತರುಣಾರ್ಕ . ಕೋಟಿ ಭಾ . ಸುರೆ ಲಂಬೋ . ದರಮಾತೆ ।
ವಿ ವಿ ಬ್ರ
ಗಿರಿಜಾತೆ . ಲೋಕವಿ . ಖ್ಯಾತೇ ॥

ಅಷ್ಟತಾಳ

ಕೇದಾರ ಗೌಳ

ವಿ ವಿ ವಿ ವಿ ವಿ ರು
ಕಾಲ ಕಂ . ಧರ ಕಾಲ . ಕಾಲದಿ . ಶಾಪಟ । ಘಾಲನ . ಯಾನ ಶಂಕರ ॥

ವಿ ವಿ ವಿ ವಿ ವಿ ರು
ನೀಲಲೋ . ಹಿತ ರುಂಡ . ಮಾಲಸ . ದಾಶಿವ । ಶೂಲಿಗಿ . ರೀಶವೃಷ ॥

ತೋಡಿ

ವಿ ಬ್ರ ವಿ
ಏನೆಂದೇs । ಕಾವು । ಏನೆಂದೇs ॥ ಪಲ್ಲವಿ ॥

ವಿ ವಿ ವಿ ಬ್ರ
ಏನೆಂದೆ . ಕಾಮಯಿೂ . ಕಾಣುವ . ಜನಕೆs ॥

ವಿ ವಿ ವಿ ಬ್ರ
ನೀನೆತಿ . ನಗೆಗೇಡು . ಮಾಡಿದೆ . ದಿಟಕೆs ॥ ಅನುಪಲ್ಲವಿ ॥

ವಿ ವಿ ವಿ ಬ್ರ
ಅಜವಿಷ್ಣು . ಮೊದಲಾದ . ದೇವರ್ಕ . ಳೆಲ್ಲ ॥

ವಿ ಬ್ರ ವಿ ಬ್ರ
ನಿಜದಿ ನಿ . ನ್ನಯ ವಶ . ಸಿಲುಕಿಹ . ರಲ್ಲ ॥

ವಿ ವಿ ವಿ ಬ್ರ
ತ್ರಿಜಗವ . ಗೆಲ್ವೆನಿ . ನ್ನಂಬನು . ಹೂಡಿ ॥

ವಿ ವಿ ವಿ ಬ್ರ
ರಜತಾದ್ರಿ . ವಾಸಗೆ . ಹೆದರಿದೆ . ಹೇಡಿ ॥

ಕಾಪಿ

ವಿ ವಿ ಬ್ರ + ಬ್ರ
ಲಾಲಿಸಿ . ಕೇಳೆನ್ನ . ಮಾತ ॥ ದೈತ್ಯ । -

ವಿ ವಿ ವಿ ಬ್ರ
ಪಾಲ ಸ . ದ್ಗುಣವಂತ . ಲೋಕವಿ . ಖ್ಯಾತ ॥ ಪಲ್ಲವಿ ॥

ವಿ ವಿ ಬ್ರ
ಏನಿದು . ಭ್ರಮೆಯನಾಂ . ತಿರುವೆ ? ।

+ಬ್ರ ವಿ ವಿ ವಿ ಬ್ರ
ದೇವ ! ಸೇನಾ ನಿ . ಯೊಡನೆ ಸಂ . ಗ್ರಾಮವು . ತರ . ವೇ ? ॥

ವಿ ರಿ ಬ್ರ +ಬ್ರ
ಆನೆಗ . ಜಾಳಿಯು . ಸರಿಯೇ ? ॥ ಇಂತು !

ವಿ ವಿ ವಿ ಬ್ರ
ಮಾನಿಸ . ದುಜ್ಜುಗ . ವೇನೆಂಬು . ದರಿಯೇ ! ।

ನಾದನಾಮಕ್ರಿಯ

ವಿ ವಿ ವಿ +ಬ್ರ ವಿ ವಿ
ತಂಗಿಯ . ಕರೆದು ಮಾ . ತಾಡಿದ ॥ ಮಾನ । ಭಂಗದ . ಪರಿಯೆಲ್ಲ .

ವಿ ವಿ ವಿ ವಿ +ಬ್ರ
ನೋಡಿದ ॥ ಹಿಂಗದ . ರೌದ್ರವ . ತಾಳಿದ ॥ ಅಂತ !

ವಿ ವಿ ವಿ
ರಂಗವಿ . ದೇನೆಂದು . ಕೇಳಿದ ॥ .

ಕಾಂಭೋಜ

ವಿ ವಿ ಬ್ರ +ಬ್ರ ವಿ ವಿ ಬ್ರ
ಗುರುವರ್ಯ . ಕೇಳಿನ್ನ . ಮಾತ ॥ ನಿನ್ನೊ । ಳಿರುಹುವೆ . ನೆಲ್ಲ ಪ್ರಖ್ಯಾತ॥

ವಿ ವಿ ವಿ ವಿ ವಿ ವಿ
ಹರಿಹರ . ಶರಜರ . ಕರುಣದಿ . ನಮಗಿನ್ನು । ದುರುಳರ . ಭಯವೆಲ್ಲಿ .

ವಿ ವಿ
ದೊರಕಿತು . ಸೌಖ್ಯವು ॥

ಸಾರಂಗ

ವಿ ರು ಗು ವಿ ವಿ ರು
ಕೇಳು ಪ . ದ್ಮಾಖ್ಯರಾಯ ॥ ನಿ . ನ್ನೊಳು ನಾವು । ಪೇಳುವ . ನುಡಿಯ

ವಿ ವಿ ವಿ ವಿ
ಜೀಯ ॥ ಕಾಳಗ . ದೊಳು ತವ . ಬಾಲ ಭಾ . ಸ್ಕರ ಕೋಪ ।

ವಿ ವಿ ವಿ ವಿ
ಖೂಳ ಶೈ . ವರನೆಲ್ಲ . ಕಾಳಿಸ . ಗಿದುದನ್ನು ॥

ಭೈರವಿ

ವಿ   ರು   ಗು   ವಿ   ವಿ   ರು
ಗರಿಜಾತೆ. ಲಾಲಿಸೀ ಗಽ ‖ ಹಿಂತಿರುಗಿದ । ಧುರದಿ ವು. ಹೇಶ ಬೇಗಽ ‖
ವಿ   ವಿ   ವಿ   ವಿ   ವಿ   ರು
ಪರಿಯಲ್ಲ. ಜಯುವಿಂದು. ದೊರಕದು. ನಿನ್ನಯು । ತಿರದೊಳೆಂ. ತಿಹುದೋ
ಯೋಗಽ ‖

ಪೂರ್ವಿ

ವಿ   ರು   ಗು   ವಿ   ವಿ   ರು
ಭಿಕ್ಷೆಯು. ನೀಡೇದೇವಿ ‖ ಸ. ನ್ಯಾಸಿಗೆ । ಭಿಕ್ಷೆಯ. ನೀಡೇದೇವಿ ‖ ಪಲ್ಲವಿ ‖
ವಿ   ವಿ   ವಿ   ವಿ   ವಿ   ವಿ   ವಿ
ಕುಕ್ಷಿಗಾ. ಧಾರವಿ. ಲ್ಲದೆ ದೇಶ. ದೇಶ ಪ್ರ । ದಕ್ಷಿಣೆ. ಗೈದಿಲ್ಲಿ. ಬಂದೆ
ಬ್ರ
ಕಾ. ಣವ್ಮ ‖

ಕೋರೆ

ವಿ   ಬ್ರ   ಗು   ವಿ   ವಿ   ಬ್ರ
ಪೋಗಬೇ. ಕಯ್ಯ ‖ ಸೇ. ತುವ ದಾಟಿ । ಸಾಗಬೇ. ಕಯ್ಯಽ ‖
ವಿ   ವಿ   ವಿ   ವಿ   ವಿ
ಈಗನಾ. ಮುಂದೆ ತಾ. ಮುಂದೆಂದು. ಹೆಣಗದೆ । ಸಾಗರ. ದೊಳು
ವಿ   ವಿ   ಬ್ರ
ಬೀಳ. ಲಾಗದಂ. ದ ದೊಳು ‖

ಪಹಡಿ

ವಿ   ವಿ   ಬ್ರ   +ಬ್ರ   ವಿ   ವಿ
ಆರೋ ಬಂ. ದಾ ಕಪಿ. ತಾನು ‖ ನಿನ್ನ । ನಾರಟ್ಟಿ. ದರು ಕಾರ್ಯ.
ಬ್ರ   ಬ್ರ   ವಿ   ವಿ   ಬ್ರ   ಬ್ರ   ವಿ
ವೇನು ‖ ನೋಡೆ । ಮೂರುಕ. ಣ್ಣವನಂತೆ. ನೀನು ‖ ನಮ್ಮ । ದ್ವಾರವಾ.

ವಿ ವಿ ವಿ ವಿ ವಿ ವಿ
ಲಕರನಂ . ಜಿಸುತಲಿ . ಬಲುವೊಸೆ . ಗಾರನಂ . ದದೊಳತಿ . ಧೈರ್ಯದಿ .
ವಿ
ಕುಳಿತಿಹೆ .

ಸಾವೇರಿ

ವಿ ರು ಗು ವಿ ವಿ
ಅಳುವುದೇ . ತಕೆ ನೀತಾರೇ ॥ ನಿ . ನ್ನಯಮನ । ದೊಳು ಧೈರ್ಯ .
ರು ವಿ ವಿ ವಿ ವಿ
ತಾಳು ನೀರೇ ॥ ನೆಲೆಯಲ್ಲ . ಸಂಸಾರ . ವೆಂಬುದು · ವೊದಲೆ ನೀ ।
ವಿ ರು ವಿ ಬ್ರ
ತಿಳಿದಿರ್ಪ ಕಾರ್ಯಕಾಣೇ ॥ ಕೇಳೆಲೆ . ಜಾಣೇ ॥

[ಕೊನೆಯ ವಿಷ್ಣುಗಣ, ಬ್ರಹ್ಮಗಣಗಳ ಬದಲು ಒಂದು ರುದ್ರಗಣ ವಿಡುವ ಕ್ರಮವೂ ಇದೆ.]

ಮಿಶ್ರತೋಡಿ

ವಿ ವಿ ಬ್ರ + ಬ್ರ ವಿ ವಿ
ಕಾಮು ಸ . ನ್ನಿಭವಾತ . ಕೇಳು ॥ ಪೇಳಿ । ರಾಮು ಕಳು ಹಿದನಿಂ .
ಬ್ರ ವಿ ವಿ ಬ್ರ + ಬ್ರ ವಿ
ದಿನೊಳು ॥ ನಾಮನ . ವಿಟ್ಟು ಕೈ . ಪಾಳು ॥ ನಿನ್ನೊಳ್ । ಕಾಮಿಸಿ .
ವಿ ಬ್ರ + ಬ್ರ ವಿ ವಿ ವಿ
ಬಂದೆ ವೋ . ಹದೊಳು ॥ ಇನ್ನು । ತಾಮಸ . ಗೊಳದಿರು . ತಾಳಲಾ .
ವಿ ವಿ ವಿ ವಿ ಬ್ರ
ರೆನು ನೀಸು । ಪ್ರೇಮದಿಂ . ದಲಿ ಕೂಡು . ಸರಸ ವಾ . ತಾಡು ॥

ಶಂಕರಾಭರಣ ಮಿಶ್ರ

ವಿ ವಿ ಬ್ರ +ಬ್ರ ವಿ ವಿ ವಿ
ಏಕಪ . ತ್ನಿಯ ವ್ರತ . ನಿನಗೆ ॥ ಬ್ರಹ್ಮಚಾರಿತ್ವ । ಸಾಕರಿ . ಸುತಿದೆತ .
ಬ್ರ ವಿ ವಿ ಬ್ರ + ಬ್ರ ವಿ
ಮ್ಮನಿಗೆ ॥ ಬೇಕೆಂತೆ . ಗುರುತವಾ . ತನಿಗೆ ॥ ಪಾಲಿ . ಸಯ್ಯ ವಿ ।
ವಿ ವಿ ಬ್ರ
ವೇಕದಿಂ . ತಮ್ಮಲ . ಕ್ಷಣಗೆ ॥

ಮಧುಮಾಧವಿ

ವಿ ವಿ ವಿ . ಬ್ರ + ಬ್ರ ವಿ
ದೇವ ರಾ. ಘವ ನೋಡು. ನೋಡುತ್ತ. ಕಡೆಯಂ ॥ ತಮ್ಮ। ಸಾವಿಗಂ.
ವಿ ವಿ ಬ್ರ ವಿ ವಿ ವಿ
ಜಡೆ ಕಾದು. ತಿರುವ ಸಂ. ಗತಿಯಂ ॥ ರಾವಣ. ಕಳುಹಿದ. ಭಟರೆಲ್ಲ.
ಬ್ರ + ಬ್ರ ವಿ ವಿ ವಿ ಬ್ರ
ಬಂದುಂ ॥ ಸುತ್ತು। ಕಾವರಾ. ಹುಡುಗನ. ಮೋಸ ಬಂ. ತಿಂದಃ ॥

ಯಮುನಾ ಕಲ್ಯಾಣಿ

ವಿ ವಿ ವಿ + ಬ್ರ ವಿ ವಿ
ಯಾರಿವ. ಳಮುಮುಬಲ್. ಮಯ್ಯಾರಿ। ಆಹಾ। ಮಾರನಂ. ಗನೆಯಂತಿ.
ವಿ ವಿ ವಿ ವಿ + ಬ್ರ
ಹೇಳುಪ್ರೋರಿ ॥ ಪಲ್ಲವಿ ॥ ಸಲಿಲಜಾಂ. ಬಕಿಕುಟ. ಕೊರಗಿದರ್ಗ ॥ ದೃಷ್ಟಿ।
ವಿ ವಿ ವಿ ವಿ ವಿ
ಚಲಿಸಿ ನಿ. ಲಿಸಿ ನೋಡು. ವಳು ಕದ್ದು ॥ ಲಲಿತಹ. ಸ್ತಗಳ ನೆ. ತ್ತುತ
ವಿ + ಬ್ರ ವಿ ವಿ ವಿ
ಮೇಲೆ ॥ ಮತ್ತೆ। ನೆಲನ ಗೀ. ಚುತ ನಗು. ವಳು ಬಾಲೆ ॥

ಸೌರಾಷ್ಟ್ರ

ವಿ ವಿ ವಿ ವಿ ಬ್ರ ಬ್ರ + ಬ್ರ
ಬಿನ್ನಹ. ಗೈವೆ ತಾ. ನೆಸ್ಸುಪ. ವಚನವ। ನಮ್ಮ ಕೇಳಂ ॥ ಯುದ್ಧ।
ವಿ ವಿ ವಿ ವಿ ಬ್ರ ಬ್ರ
ಸನ್ನಾಹ. ಗೈದೀಗ. ನಿನ್ನೊಳ. ರುಹ ಬಂದೆ। ನಮ್ಮ ಕೇಳಂ ॥

ಎರಕಲ ಕಾಂಭೋಜಿ

ವಿ ವಿ ವಿ ಬ್ರ ವಿ
ಭಳಿರೆ ಮೆ. ಚ್ಚಿದೆ ಕೇಳು. ಖಳಕುಲ. ಮಣಿಯೋ ॥ ಇಳೆಯು ಮಿ. ಕ್ಕಿನ
ವಿ ವಿ ಬ್ರ ವಿ ವಿ
ಧೊರೆ. ಗಳು ನಿನ. ಗೆಣೆಯೋ? ॥ ಪಲ್ಲವಿ ॥ ಅತಿಬಲಾ. ನ್ವಿತ ನಿನ್ನ.

ವಿ ವಿ ವಿ ವಿ ವಿ ವಿ
ಸತತ ಸೇ. ವಿಪರು ದಿ । ಕ್ಷತಿಗಳ. ಸುರರೆಲ್ಲ. ಹಿತರಿನ್ನೀ. ಲೋಕದೊ ।
ವಿ ರು ಗು ವಿ ವಿ ರು
ಳತುಲವಿ. ಖ್ಯಾತ ನೀ**ನು** ॥ ನಿ. ನ್ನಯ ವಸು । ಮತಿಗೆ ನಾ. ಪೇಳ್ವುದೇ**ನು** ॥
ಗು ವಿ ವಿ ರು ಗು ವಿ ವಿ
ಸೌ. ಭಾಗ್ಯಶೋ । ಭಿತವಾದ. ನಗರವಿ**ನ್ನು** ॥ ನಿ. ನ್ನಸಮು ಭ । ಕುತಿ
ವಿ ವಿ ಬ್ರ
ಗಾಗಿ ತೋಷಾಬ್ಧಿ. ಯೊಳಗಿರ್ಪೆ. ನಾ**ನು** ॥

ಶಂಕರಾಭರಣ

ವಿ ಬ್ರ ವಿ ವಿ ವಿ ವಿ
ಕಂಡನು । ವಿಶ್ವ. ರೂಪವ. ಪದ್ಮನು । **ಕಂಡ**ನು ॥ ಪಲ್ಲವಿ ॥ **ಕಂಡ**ನು.
ವಿ ಬ್ರ + ಬ್ರ ವಿ ವಿ ಬ್ರ + ಬ್ರ
ವಿಶ್ವನಾ. ಯಕ**ನೆ** ॥ ನಿಲೆ । ಗೊಂಡಿರು. ವಾ ದಿವಾ. ಯಕ**ನೆ** ॥ ಆಹ ।
ವಿ ವಿ ವಿ ವಿ ವಿ ವಿ
ಘಂಡನಿ. ಧಿಯ ದೇವ. ತಂಡವಂ. ದಿತ ಸುಪ್ರ । **ಚಂಡ** ಮೂ. ರುತಿಯ
ವಿ ವಿ ವಿ ವಿ
ಬ್ರ. ಹ್ಮಾಂಡನಾ ಯಕನನ್ನು ॥ ಅನುಪಲ್ಲವಿ ॥ ಕು**ಲ**ಗಿರಿ. ಗಳುದಿವ್ಯ.
ಬ್ರ + ಬ್ರ ವಿ ವಿ ಬ್ರ + ಬ್ರ ವಿ
ಪದ**ದಿ** ॥ ಸುತ್ತು । ನೆ**ಲ**ಸೆದಿ. ಗ್ಗಜಗಳ್ಸ. ದ್ವಿಧ**ದಿ** ॥ ನಠಖ । ವ**ಲ**ಯುದೊ.
ವಿ ಬ್ರ + ಬ್ರ ವಿ ವಿ ಬ್ರ + ಬ್ರ
ಳಿಸೆದಿರ. ಲುದ**ಧಿ** ॥ ಕೂಡಿ । ಜ**ಲ**ಜಾಕ. ರಂಗಳು. ಮುದ**ದಿ** ॥ ಓಹೊ ।
ವಿ ವಿ ವಿ ವಿ ವಿ
ಚೆ**ಲು**ವ ಮೂ. ರ್ತಿಯ ಜಂಘೆ. ಯುಲಿ ಪಾಶಿ. ಜಾನೂರು । ಸ್ಥ**ಲ**ದಿವಿ.
ವಿ ವಿ ವಿ
ದ್ಯಾಧರ. ರೊಲಿದುರಾ. ಜಿಸುತಿರೆ ॥

ಮಾರವಿ

ಬ್ರ ರು ಗು ವಿ ಬ್ರ ರು
ಜಾ**ಣ**. ನಹುದಹು**ದೋ** ॥ ಸಂ. ಗರ ಕತಿ । ತ್ರಾ**ಣ**. ನಹುದಹು**ದೋ** ॥

ವಿ ವಿ ವಿ ವಿ ವಿ
ಕ್ಷೋಣಿಯೊಳ್ . ನಿನಗೆಣೆ . ಗಾಣೆ ಪ . ರಾಕ್ರಮಿ ‖ ಪಲ್ಲವಿ ‖ ಇನವಂಶ .
ವಿ ಬ್ರ +ಬ್ರ ವಿ ವಿ ಬ್ರ ವಿ
ದರಸುಗ . ಳೊಳಗೆ ‖ ಹಿಂದೆ । ಜನಿಸಿದ . ವರು ನಿನ್ನ . ಕೆಳಗೆ ‖ ಘನಚೋರ.
ವಿ ವಿ ವಿ ವಿ ರು ಗು
ತನದ ಶಿ . ಖಂಡಿವಿ . ದ್ಯೆಯ ನೆಷ್ಟ । ದಿನಸಾಧಿ . ಸಿದೆಯೊ ನೀನು ‖ ಲಂ.
ವಿ ವಿ ರು ಗು ವಿ ವಿ
ಡಿಗಳ ದು । ರ್ಗುಣವಕ್ಕೆ . ಗೊಂಡೆಯೇನು ‖ ನಿ . ನ್ನಂಥ ಕು । ಜನರಿಲ್ಲ .
ರು ಗು ವಿ ಬ್ರ ರು
ಸಾಕ್ಷಿಗಿನ್ನು ‖ ರಾ . ಘವ ಬಲು । ಜಾಣ . ನಹುದಹುದೋ ‖

ಧನಶ್ರೀ

ವಿ ಬ್ರ ವಿ ವಿ ವಿ
ಲಾಲಿಸು ‖ ಮಾತ । ಲಾಲಿಸು ‖ ಪಲ್ಲವಿ ‖ ಮೂಲೋಕ . ದೊಡೆಯನ .
ವಿ ವಿ ವಿ ವಿ ವಿ
ಮಹಿಮೆಯ . ಕಿವಿಗೊಟ್ಟು ‖ ಅನುಪಲ್ಲವಿ ‖ ಕಾರೆಂಬ . ಕತ್ತಲೆ. ಕವಿಯಲು.
ವಿ ವಿ ವಿ ವಿ +ಬ್ರ ವಿ
ದಶದಿಕ್ಕು । ಘೋರೆಂದು . ಮಳೆಹೊಯ್ಯು . ತಿರಲಾಗ ‖ ಶ್ವೇತ । ದ್ವಾರದ .
ವಿ ವಿ ಬ್ರ ವಿ ವಿ ವಿ
ಲಾಳಪಿಂ . ಡಿಗೆಬೇಗ ‖ ಕಳಚಿ । ದಾರಿಯಾ . ಯಿತು ಶೌರಿ . ಬರುವಾಗ ‖
+ಬ್ರ ವಿ +ಬ್ರ ವಿ +ಬ್ರ ವಿ ವಿ
ಕಾಣು . ತಿರುವಾಗ ‖ ಕಾವ . ಲವರಾಗ ‖ ನಿದ್ರೆ । ಭಾರಿಸ . ಲೆಚ್ಚರಿ .
ವಿ +ಬ್ರ ವಿ ವಿ ವಿ
ಲ್ಲದ ಯೋಗ ‖ ಸೂತ್ರ । ಧಾರಿಯ . ಮಹಿಮೆಯಿಂ . ದಲಿ ಬೇಗ ‖

ಏಕತಾಳ

ಮಧುಮಾಧವಿ

ವಿ ವಿ ವಿ ಬ್ರ ವಿ ವಿ
ದಶರಥ . ಸುತಧರ . ಣಿಪ ಕುಲ . ದೀಪ ‖ ಕುಸುಮಸಾ . ಯಕರೂಪ .

ವಿ ಬ್ರ ವಿ ವಿ ವಿ
ಕೀರ್ತಿಕ . ಲಾಪ ‖ ಪಲ್ಲವಿ ‖ ಧರೆಯನಾ . ಳುವ ಮಹಾ . ಪ್ರಭುಗಳು .
ಬ್ರ ವಿ ವಿ ವಿ ಬ್ರ ವಿ
ನೀವು ‖ ಮರದೊಳು . ಚರಿಪ ವಾ . ನರರಯ್ಯ . ನಾವು ‖ ಸರಿಯೆ
ವಿ ವಿ ಬ್ರ ವಿ ವಿ ವಿ
ಮಾನವರಿಗೆ . ಶಾಂತನಾ . ಗಯ್ಯ ‖ ತರಣಿನಂ . ದನನೊಳು . ಕೋಪ
ಬ್ರ
ವೇ . ಕಯ್ಯ ‖

ಮಧ್ಯಮಾವತಿ

ವಿ ವಿ ವಿ ಬ್ರ ವಿ ವಿ ವಿ
ಕೇಳೆನ್ನ . ಮಾತನು . ಶ್ರೀರಾಮ . ಚಂದ್ರ ‖ ಪೇಳುವೆ . ನುನ್ನ . ದಿರವ
ಬ್ರ ವಿ ವಿ ವಿ
ಭೂ . ಮೀಂದ್ರ ‖ ಪಲ್ಲವಿ ‖ ಜೀಯ ಚಿಂ . ತಿಪುದೇಕೆ ? . ಬಿಡುಬಿಡು .
ವಿ ವಿ ವಿ ಬ್ರ ವಿ ವಿ
ಮನಸಿನ । ಮಾಯೆಯು . ಲೋಕಪಾ . ಲಕನೇ ‖ ವಾಯು ಸಂಭವನ
ವಿ ವಿ ವಿ ವಿ ವಿ ಬ್ರ
ಸಂ . ಜೀವನ . ಕೋಸುಗ . । ಪ್ರಿಯದಿ । ಕಳುಹಯ್ಯ . ದ್ರೋಣಪ . ರ್ವತಕೆ ‖

ಬಿಲಹರಿ

ವಿ ವಿ ವಿ ವಿ ವಿ ವಿ
ಲೇಸನಾ . ಡಿದೆನುವ್ವ . ಯೊಸ್ವಲ್ಪ . ಕಾರ್ಯಕೆ । ಈಸುಚಿಂ . ತೆಗಳೇಕೆ .
ವಿ ಬ್ರ ವಿ ವಿ ವಿ ವಿ ವಿ
ಹೇಸುಗು . ಣಾಢ್ಯ ‖ ಏಸುಂದಿ . ವಸವನ . ವಾಸದೊ . ಳಿರಬೇಕು । ಆಸುದ್ದಿ .
ವಿ ವಿ ಬ್ರ
ಯೆಃನ ಗೀಯೆ . ಹೇಶಶಿ . ವದನೇ ‖

ನೀಲಾಂಬರಿ

ವಿ ರು +ಬ್ರ ವಿ ವಿ ರು
ತಂಗಿ ಪೇ . ಳೆನು ಚೋದ್ಯ ‖ ಶಕ್ರ . ನೆಲ್ಲೆಂಬು । ದಂಗ ಜಾಂ . ತಕಗೆ

ವಿ ರು + ಬ್ರ ವಿ ವಿ
ವೇದ್ಯ ॥ ಮಂಗಳೆ . ಶಚಿಯು ತಾನು ॥ ತೋರ . ಳನ್ನೆತ್ತ । ಹಿಂಗಿದ .
ರು
ಳೇನಿದೇನು ॥

ಸೌರಾಷ್ಟ್ರ

ವಿ ವಿ ರು ವಿ ವಿ
ನೆನೆಯಿರೊ . ಜನರೆಲ್ಲ . ಗುಣಯುತನ ॥ ಘನಮೂರ್ತಿ . ಮದಪೂರ ಗಣ
ರು ವಿ ವಿ ರು ವಿ ವಿ
ನಾಥನ ॥ ಪಲ್ಲವಿ ॥ ದೇವರ . ದೇವ ಕೃ . ಪಾಕರನ ॥ ಪಾವನ . ಚರಿತ
ರು ವಿ ಲ ರು ವಿ
ಪು . ಣ್ಯೋದಯನ ॥ ಭಾವಜ . ವಿಷಯಕೆ . ಸಿಲುಕದನ ॥ ಕೋವಿ ದ.
ವಿ ರು
ಗಿರಿಜೆಯ . ವರಸುತನ ॥

ಪಹಡಿ

ವಿ ವಿ ವಿ ವಿ ವಿ ವಿ
ಆಡಿಕೊಂ . ಡರೆ ಮುನ್ನ । ಹೇಡಿಯೆಂ . ಬರು ನನ್ನ । ನಾಡ ಮಾ . ತಲ್ಲ
ವಿ ಬ್ರ
ನೀ । ನೋಡಿಕೋ . ಮನದಿ ॥

ಆನಂದ ಭೈರವಿ

ವಿ ವಿ ಬ್ರ + ಬ್ರ ವಿ ವಿ
ಯಾರಯ್ಯ . ಮನುಜೇಶ . ತನ್ನ ॥ ಕೂಡಿ । ಕಾರಡ . ವಿಯೊಳು ಸಂ .
ಬ್ರ ವಿ ವಿ ಬ್ರ + ಬ್ರ ವಿ ವಿ ಬ್ರ
ಪನ್ನ ॥ ಕಾರಣ. ವೇನಿಲ್ಲಿ. ಬರಲು ॥ ಪೇಳು । ಕಾರುಣ್ಯ . ಭಾವವಿ . ನ್ನಿರಲು ॥

ಆನಂದ ಭೈರವಿ

ಬ್ರ ಬ್ರ ಬ್ರ ಬ್ರ ಬ್ರ ಬ್ರ ಬ್ರ ಬ್ರ
ಮೂರು . ಲೋಕ . ಕಗ್ರ . ಗಣ್ಯ । ವೀರ . ದನುಜ . ಕುಲವ . ರೇಣ್ಯ ।
ವಿ ಬ್ರ ವಿ
ರಕ್ಷಿಸು ॥ ಎನ್ನ । ನೀಕ್ಷಿಸು ॥

ಕಾಂಬೋಧಿ

ಬ್ರ ಬ್ರ ಬ್ರ ಬ್ರ ಬ್ರ ಬ್ರ ಬ್ರ ಬ್ರ ಬ್ರ
ಏತ . ಕಿಲ್ಲಿ . ಬಂದೆ . ದುಷ್ಟೆ । ಪಾತ . ಕೀ ಹೇ . ಜಾರೇ ॥ ಆತ . ನೀತ .
ಬ್ರ ಬ್ರ ಬ್ರ ಬ್ರ ಬ್ರ
ನೆಂದು . ಪೇಳ್ವ । ಮಾತು . ಕೊಟ್ಟ್ಟ . ದಾರೇ ॥

ಶಂಕರಾಭರಣ

ಬ್ರ ಬ್ರ ಬ್ರ ಬ್ರ ಬ್ರ ಬ್ರ ಬ್ರ ಬ್ರ
ಕಾಮಿಂ . ನೀ ಕೇ . ಳೆರೆಯ . ನಿಂಗೆ । ತಾಮಂ . ಸಽವೇ . ನಾಯ್ತೊ . ಕಾಣೆ।
ಬ್ರ ಬ್ರ ಬ್ರ ಬ್ರ ಬ್ರ ವಿ
ಪ್ರೇಮಂ . ದಿಽನೀ . ಬರಲು . ಭಯವಿ । ರಾಮಂ . ವಾಯ್ತಿನ್ನು ॥

ನಾದನಾಮಕ್ರಿಯೆ

ಬ್ರ ಬ್ರ ಬ ಬ್ರ ಬ್ರ ಬ್ರ ಬ್ರ ಬ್ರ
ಲೇಸು . ಕಾರ್ಯ . ವೇನೊ . ನಿನಗೆ ॥ ಕಂಸ . ರಾಯಂ ॥ ಇವಳ । ಘಾಸಿ .
ಬ್ರ ಬ್ರ ಬ್ರ ಬ್ರ ಬ್ರ ಬ್ರ ಬ್ರ ಬ್ರ
ಮಾಳ್ಪ . ದುಚಿತ . ವಲ್ಲ । ಕಂಸ . ರಾಯಂ ॥ ಹೇಸ . ದಿಹಳೇ . ಭಾಗ್ಯ .
ಬ್ರ ಬ್ರ ಬ್ರ ಬ್ರ ಬ್ರ ಬ್ರ ಬ್ರ ಬ್ರ
ಲಕ್ಷ್ಮಿ । ಕಂಸ . ರಾಯಂ ॥ ಕೀರ್ತಿ । ಮಾಸು . ವುಽದ್ಧೈ . ಗ್ರಹಿಸಿ . ನೋಡು ।
ಬ್ರ ಬ್ರ
ಕಂಸ . ರಾಯಂ ॥

ಪೂರ್ವಿ

ವಿ ವಿ ವಿ ಬ್ರ ವಿ ವಿ
ಪರದೇಶ . ದೊಳಗುಳ್ಳ . ಕಪಿಗಳ . ನೆಲ್ಲಾ ॥ ಕರೆಸಿಕೊಂ . ಬುದಕಿಪ್ಪ .
ವಿ ಬ್ರ ವಿ ವಿ ವಿ ವಿ
ತಡವಾಯಿ . ತಯ್ಯಾ ॥ ಇರಬೇಕು . ದಯವೆಂದು . ಯಿನಜನ . ಕರೆತಂದು.
ವಿ ವಿ ವಿ ಬ್ರ
ಚರಣಕೊ . ಪ್ಪಿಸಿದಳು . ಚಪಲಾಕ್ಷಿ . ತಾರೇ ॥

ತ್ರಿವುಡೆ ತಾಳ

ನೀಲಾಂಬರಿ

ವಿ ರು ಗು ವಿ ವಿ
ಬಾಲನೇ . ನಾದ ಕಾಂತ ‖ ವೋ . ಹಸ ಕಂಠ । ಮಾಲಮಹಾ . ಕ್ರಿಕ
ರು ವಿ ವಿ ವಿ ವಿ
ಜಯಂತ ‖ ಶೀಲ ಸುಂ . ದರ ಗುಣ . ಜಾಲ ಕೋ . ಮಲನಂಶು । ಮಾಲಿ
ವಿ ರು ಗು ರು
ಶೋ . ಭಿತನೇನಾದ ‖ ದಾ . ವಲ್ಲಿಪೋದ ‖

ಮುಖಾರಿ

ವಿ ಬ್ರ ಗು ವಿ ವಿ ಬ್ರ
ಬೇಡವೈ . ಛಲವು ‖ ನಿ . ಮ್ಮೊಳಗಿಂತು । ಬೇಡವೈ . ಛಲವು ‖ ಪಲ್ಲವಿ ‖
ವಿ ವಿ ವಿ ವಿ ವಿ ವಿ
ಬೇಡವೈ . ಛಲವು ನಿ . ಮ್ಮೊಳಗಿಂತು . ಸುಮ್ಮನೆ । ರೂಢಿಯೊ . ಳಪಕೀರ್ತಿ .
ವಿ ವಿ ವಿ ವಿ ವಿ
ಗೀಡಾಗ . ದಿರಿ ನೀವು ‖ ಅನುಪಲ್ಲವಿ ‖ ದೇಶಕಾ . ಲವನು ಹಿ . ತಾಹಿತ .
ವಿ ವಿ ವಿ ವಿ ವಿ ವಿ
ಗುಣಗಳ । ಲೇಸಿನಿಂ . ದರಿಯದೆ . ಮೂರ್ಖರ . ತೆರದಿಂದ । ದ್ವೇಷವ .
ವಿ ವಿ ವಿ ವಿ ಬ್ರ ಗು
ಪಡೆದು ನಿ . ಮ್ಮೊಳಗೆ ವಿ . ರೋಧಿಸಿ । ಮೋಸಹೋ . ಗುವಿರೇ ‖ ಸುs .
ವಿ ವಿ ಬ್ರ ವಿ ವಿ ವಿ
ಕಾರ್ಯವಿ । ನಾಶಕಾ . ಗುವಿರೇ ‖ ಸಾಸಿರ . ಮಾತೇನು . ಬಂದುದು .
ವಿ ವಿ ವಿ ವಿ ವಿ
ಬರಲಿಯೊಂ । ದಾಸೆ ತೀ . ರುವುದೈಸೆ . ನೋಡಬಾ . ರದೆ ಮುಂದೆ ‖

ಆದಿ ತಾಳ

ಬೇಗಡೆ

ವಿ ವಿ ವಿ ಬ್ರ ವಿ ವಿ
ಸಹಜವೀ . ನುಡಿ ಪೇಳ್ವು . ದಹುದೆಲೆ . ಋಷಿಯೋ ‖ ಸಹಜರ . ಕಳು
ಪಿ ಬ್ರ ವಿ ವಿ
ಹುವೆ . ತಹಡೆನಾ . ಪುಸಿಯೋ ‖ ಪಲ್ಲವಿ ‖ ರೋಗಿಯ . ಬಯಕೆ ಪಾ .

ವಿ ಬ್ರ ವಿ ವಿ ವಿ ಬ್ರ
ಲೋಗರ . ದಂತೆ ॥ ಯೋಗಿ ಪೇ . ಳಿದೆ ಸುಖ . ಸಾಗರ . ಚಿಂತೆ ॥ ೧ ॥

ಗೌಳ

ವಿ ವಿ ವಿ ಬ್ರ ವಿ ವಿ
ರಾಘವ . ನರಪತೇ . ಶೃಣುಮಮ . ವಚನಂ ॥ . ನೀಗುಣ . ನಿಧಿಯೆಂದು .
ವಿ ವಿ ವಿ ವಿ ವಿ
ನಿನ್ನ ಸೇ . ರಿದೆ ಬಂದು ॥ ಪಲ್ಲವಿ ॥ ಅತಿಕುಲ . ವತಿ ನಾನು . ಪೃಥಿವಿಪಾ .
ವಿ ವಿ ವಿ ವಿ ಬ್ರ
ಲಕ ನೀನು । ರತಿದೇವಿ . ಗೆಣೆ ನಾನು . ಮನ್ಮಥ . ನೀನು ॥

ಪಹಡಿ

ವಿ ವಿ ವಿ ಬ್ರ ವಿ ವಿ
ಒಪ್ಪುವೆ . ನಿದಕೆ ನಿ . ನ್ನಪ್ಪಣೆ . ಯಂತೆ ॥ ಒಪ್ಪುದ . ಗ್ಗದ ಕೀರ್ತಿ .
ವಿ ಬ್ರ ವಿ ವಿ ವಿ
ತಪ್ಪದೆ . ಮುಂತೆ ॥ ಪಲ್ಲವಿ ॥ ದುರುಳರ . ಭಯಕಂಜಿ . ಶರಣುಹೊ . ಕ್ಕವ
ವಿ ವಿ ವಿ ಬ್ರ ಬ್ರ ಬ್ರ
ರನ್ನು । ಪೊರೆವುದೆ . ಮ್ಮಯಬದ್ಧ . ಕಾರ್ಯ ॥ ಧೈರ್ಯ । ಶೌರ್ಯ ।
ವಿ
ಗುಣವರ್ಯ ॥

ಅಂಶಗಣ ಮತ್ತು ಮಾತ್ರಾಗಣಗಳ ಹಾಡುಗಳು

ಅಟ್ಟತಾಳ

ದೇಶಿ

ಬ್ರ ವಿ ವಿ ವಿ ಇ ಳ ಇ
ಎಲ್ಲಿ - ಗೈದುವೆ . ನಿಲ್ಲು ಸಾ . ತ್ಯಕಿ ನಿನ್ನ । ಗೆಲ್ಲು . ವೆ ಕ್ಷಣ . ವಲ್ಲಿ .
ಳ ಇ ಳ ಇ ಗು
ನನ್ನಯ . । ಮಲ್ಲ . ಸಾಹಸ . ಬಲ್ಲೆ . ಯಾ ॥

ಜಂಜೂಟಿ

ವಿ ವಿ ಬ್ರ + ಬ್ರ ವಿ ವಿ
ಒಡೆಯಗಲ್ಲದ ವಸ್ತು . ವುಂಟೇ? ‖ ಮತ್ತಾ । ಬಡ ಜಿಷ್ಣು . ವಿಗೆ ಶಚಿ .

ಬ್ರ ವಿ ವಿ ವಿ ವಿ ಶಿ
ಗಂಟೇ? ‖ ಒಡನೆ ಗ . ಮಿಸು ತಂಚಿ . ನಡೆಯು ತಂ . ದಪೆನಿತ್ತ! ತಡೆದೊ.

ಳ ಶಿ ಳ ಶಿ ಳ ಶಿ ಳ
ಡಮರರ . ಬಡಿದು . ಶಕ್ರನ । ಕೆಡಹಿ . ತಾರದೆ . ಬಿಡೆನು . ನಿಶ್ಚಯಃ ‖

ಕಲ್ಯಾಣಿ

ವಿ ರು ಗು ವಿ ವಿ ರು ಶಿ
ಏಕಿನಿ . ತುಸಿರುವಿರಿ ‖ ಎ . ನ್ನೊಳುಬರಿ । ದೇಕಿನಿ . ತುಸಿರುವಿರಿ ‖ ಏಕ .

ಳ ಶಿ ಳ ಶಿ ಳ ಶಿ ಳ
ದಿನಿಶುಸಿ . ರುವಿರಿ . ಸುಮ್ಮಗ । ನೇಕ . ರೈತಂ . ದೊರಲು . ತನ್ನಯ ।

ಶಿ ಳ ಶಿ ಳ ಶಿ ಳ ಶಿ ಳ
ಶೋಕ. ತಮ್ಮಟಿ . ಗರುಹಿ . ದಂದದಿ । ಪಾಕ ಶಾಸನ . ಧಿಷಣ . ಮುಖ್ಯರು‖

ತ್ರಿಪುಟೆ ತಾಳ

ಕಾಂಬೋಧಿ

ವಿ ರು ಗು ವಿ ವಿ ರು
ಪಾಹಿ ಶ್ರೀ . ಪದ್ಮನಾಭ ‖ ನಾ . ರಾಯಣ । ಪಾಹಿ ಶ್ರೀ . ಪದ್ಮನಾಭ ‖

ಳ ಳ ಶಿ ಳ ಶಿ ಳ
ಪಲ್ಲವಿ ‖ . ಪಾಹಿ . ಸತತಾ . ನಂದ . ಮುರಹರ । ತ್ರಾಹಿ . ಇಂದ್ರಾ,

ಶಿ ಳ ವಿ ರು ಗು
ವರಜ . ಸುರವರ ‖ ಅನುಪಲ್ಲವಿ ‖ ಪುಂಡರೀ . ಕಾಕ್ಷದೇವ ‖ ಕೈ . ಟಭ

ವಿ ವಿ ರು ಶಿ ಳ ಶಿ
ಮದ । ಖಂಡನಾ . ನತ ಸಂಜೀವ ‖ ದಂಡ . ಧರನುತ . ಮೌನಿ . ಜನ

ಳ ಶಿ ಳ ಶಿ ಳ ಶಿ ಳ
ಮಾ । ರ್ತಾಂಡ . ವಿಧುಭವ . ನಾಶ . ಖಳ ಗಜ । ಗಂಡ . ಭೇರುಂ .

ಶಿ ಳ ಶಿ ಳ ಶಿ ಳ
ಡಾಂಡ . ಕೋಟಿ ಬ್ರ । ಹ್ಮಾಂಡ . ನಾಯಕ . ಚಂಡ . ವಿಕ್ರಮ ‖

ಬೇಗಡೆ

ವಿ ರು ಗು ವಿ ವಿ ರು
ಏನಿದು . ದುಗುಡ ಪ್ರಿಯು ‖ ನಿ . ರ್ಜರರಾಯು । ಏನಿದು . ದುಗುಡ ಪ್ರಿಯು
ಖಿ ಳ ಖಿ ಳ ಖಿ ಳ
‖ ಪಲ್ಲವಿ ‖ ಏನು . ದುಗುಡವಿ . ದುಸಿರು . ತನ್ನೊಡ । ನಾನ . ನದ ಸಿರಿ .
ಖಿ ಳ ಖಿ ಳ ಖಿ ಳ ಖಿ
ಕಂದಿ . ತೇಕನು । ಮಾನ . ವನು ಬಿಡು . ಬಿಡು ಗು . ಣಾಂಬುಧಿ । ಕಾಣೆ .
ಳ ಖಿ ಳ ವಿ ರು
ಧೂರ್ಜಟಿ . ಯಾಣೆ . ಸತ್ಯವ ‖ ಅನುಪಲ್ಲವಿ ‖ ದುರುಳರ . ಭಯುವೇಪೇಳು ‖
ಗು ವಿ ವಿ ರು ಖಿ ಗು ೨
ಅ . ಲ್ಲದೊಡೆಮ್ಮ । ಸುರರ . ಭೇ . ದವೆ ಕೃಪಾಳೇ ‖ ಒರೆದ . ನೇ? ಕೃ .
ಖಿ ಳ ಖಿ ಗು ೨ ಖಿ ಳ ಖಿ
ತ್ರಿಮುವ . ನಾರದ । ಜರೆದ . ನೇ ಕಂ . ಗೊರಳ . ದಯುವನು । ತೊರೆದ .
ಗು ೨ ಖಿ ಳ ಖಿ ಗು ೨ ಖಿ ಳ
ನೇ? ಶ್ರೀ . ಹರಿಯು . ಶರಣರ । ಮರೆದ . ನೇ? ಬೇ . ರಿಹುದೆ . ಕಪಟಗ ।
ಖಿ ಳ ಖಿ ಳ ಖಿ ಳ ಖಿ ಳ
ಳರಿಯೆ . ನೆಲೆ ಪ್ರಾ . ಣೇಶ . ನೀನೀ । ತೆರದಿ . ದುಃಖಿಪ . ರೇನ . ಕಟವಿದ ।
ಖಿ ಳ ಖಿ ಳ ಖಿ ಳ
ನರುಹ . ದಿರೆ ಬಿಡೆ . ಬಿಡೆನು . ಪದಯುಗ । ಕೆರೆಗು . ವೆನು ಕೇಳ್ .
ಖಿ ಳ
ಕರುಣೆ . ಯಿಂದಲಿ ‖

ವೃಂದಾವನ ಸಾವೇರಿ

ವಿ ರು ಗು ವಿ ವಿ ರು
ಬಂದೆಯಾ . ಪಾರ್ಥ ನೀನು ‖ ಸಂ . ಶಪ್ತಕ । ರಿಂದಲ್ಲಿ . ಬಿಟ್ಟರೇನು? ‖
ಗು ವಿ ವಿ ರು ಗು ರು
ಸಂ . ಗ್ರಾಮದಿ । ನೊಂದು ಬಿ . ದ್ದಿರುವೆ ನಾನು ‖ ಪೋ . ದಲ್ಲಿ ನೀನು ‖
ಖಿ ಳ ಖಿ ಳ ಖಿ ಳ ಖಿ
ಚಂದ . ವಾದುದೆ? ರಣದೊ . ಳಾರವಿ । ನಂದ . ನಗೆ ಹದ . ನೇನು .

ಳ ಖ ಳ ಖ ಳ ಖ
ಮಾಡಿದೆ । ಕೊಂ ದೆ . ಯೋ ? ಖಗೆ . ಸಲಹಿ . ದೆಯೊ ವೋ । ಣಿಂದು .

ಳ ಖ ಳ
ನುಡಿ ನುಡಿ . ತಡೆಯ . ದೀಕ್ಷಣ ॥

ಆದಿ ತಾಳ

ತೋಡಿ

ವಿ ರು ವಿ ಬ್ರ ವಿ ರು
ಅಸುರೆ ನೀ . ಬಳಲಿದೆಯಾ ॥ ದಿಗ್ದೇಶ . ವೆಲ್ಲ । ಉಸಿರೆ ಹಾ . ತೊಳಲಿ

ವಿ * ವಿ ವಿ ವಿ
ದೆಯಾ ॥ ವ್ಯಸನಗ್ಯೆ . ಯುದಿರ್ ಮುಂದೆ . ತುಸು ದೂರ . ತೆರಳುವು ।

ಳ ಳ ಖ ೫ ಳ ಳ
ತ್ತಿ ಸೆವ ಪಿ . ಪಿನವದ . ನುಸುಳಿ . ನೋಡೆತರು । ವಿಸರದೆ . ಡೆಯೊಳಿಹ .

ಳ ಳ
ಳಸಿತಾ . ಲಕಿಯುಽ ॥

ಮೊದಲ ಪ್ರಾಸದ ಅನಂತರ ಇರುವ ಎರಡನೇ ಪಾದಗಲ್ಲಿ ಬ್ರಹ್ಮಗಣ, ವಿಷ್ಣುಗಣಗಳು ಬರುವ ಕ್ರಮವೂ ಇದೆ.

ತುಜಾವಂತು

ವಿ ವಿ ಬ್ರ + ಬ್ರ ವಿ ವಿ ಬ್ರ
ದೇವ ಸಂ . ಕುಲವೆಲ್ಲ . ಕೂಡಿ ॥ ಮಽಹಾ । ದೇವನ . ಪಾಡಲು . ನೋಡಿ ॥

ಖ ೫ ಳ ಳ ಳ ಳ ಳ
ಭಾವ . ಜಾರಿಹಿತ . ಭಾವದಿ . ಸರ್ವರ । ಭಾವಿಸಿ . ಮನ್ನಿಸು . ತಾವನಿ . ತೆ

ಳ ವಿ ವಿ ಬ್ರ + ಬ್ರ
ಯುನುಽ ॥ ಪಲ್ಲವಿ ॥ ಗಿರಿಜೆಯು . ಕಂಡುವೋ . ಹದೊಳು ॥ ಉಽಪ । ಚ

ವಿ ವಿ ಬ್ರ ವಿ ವಿ
ರಿಸಿ ಕು . ಳ್ಳಿರಿಸಿ ಪಾ . ಶ್ವದೊಳು ॥ ದುರುಳರ . ಭಯುಕೆ ಬಾ . ಡಿ

ಬ್ರ + ಬ್ರ ವಿ ವಿ ಬ್ರ ರು ರು
ಹಳು ಎಂದು । ಕರಗಿ ಮಾ . ನಸದಿ ಕಾಂ . ತನೊಳು ॥ ಒರೆದಳು . ಕೇಳೇ .

ರು ರು ರು ರು ರು ರು
ತರುಣಿಯ . ಕಷ್ಟವ । ನರಿಯೆಯ . ಶರಣರ . ಮರೆವುದು . ತರವೇ ?

ಏಕ ತಾಳ

ಮುಖಾರಿ

ವಿ ವಿ ಬ್ರ ವಿ ಬ್ರ ವಿ
ದಾನವೇ . ಶ್ವರಲಾಲಿ . ಸಯ್ಯ ॥ ಬೆದರಿದೆ . ವೆಮ್ಮ । ಮಾನ ಭಂ . ಗವ

ವಿ ಬ್ರ ರು ರು ರು ರು ರು ರು
ಪಾಲಿಸಯ್ಯ ॥ ಏನೆಂ . ಬೆವು ಆ . ವಾನರ . ಬಲವಂ । ಭೋನಿಧಿ . ಯಂದ

ರು ರು ರು ರು ರು ರು
ದೊ . ಳಾನಿಖಿ . ಳೌಘವ । ಚಾಣಾ . ಹಾನಿಯ . ಕಾಣಿಸಿ . ದುರ್ಗವ ।

ರು ರು ರು ರು
ಹಾನಿಯ . ಗೈದರ . ದೇನೆಂ . ದರಿಯೆವು ।

ಪ್ರಥಮ ಪಾದದ ಅನಂತರ ಬರುವ [illegible] ಪಾದದಲ್ಲಿ ವಿಷ್ಣುಗಣ ಬ್ರಹ್ಮಗಣಗಳ ಬದಲು ಬ್ರಹ್ಮಗಣ ವಿಷ್ಣುಗಣಗಳು ಕೆಲವು ಪದ್ಯದಲ್ಲಿ ಇರುವುದುಂಟು.

ಮುದ್ರಣ: ಆದರ್ಶ ಪ್ರೆಸ್, ಪುತ್ತೂರು, ದ. ಕ.

ಇದೇ ಲೇಖಕನ ಇತರ ಕೃತಿಗಳು

ಸೂಕ್ತಿ ಮಂಜರಿ [ಪದ್ಯ]	ಬೆಲೆ 0=30 ಪೈಸೆ
ನೀತಿ ಮಂಜರಿ [ಪದ್ಯ]	ಪ್ರಕಟವಾಗಲಿದೆ
ಯಕ್ಷಗಾನ ದುರ್ಯೋಧನ ವಧೆ	,,
ಭಜನ ಪದ್ಯಾವಳಿ	,,
ಬಾಲಗೀತಾವಳಿ [ಶಿಶುಗೀತೆಗಳು]	,,
ಮಧುರಗಾನ [ಕವನ ಸಂಕಲನ]	,,
ಯಕ್ಷಗಾನ ಛಂದಸ್ಸು [ದ್ವಿತೀಯ ಭಾಗ]	,,
ಕನ್ನಡದ ಪ್ರಾಚೀನ ಛಂದಸ್ಸು	,,
ಧರ್ಮ ಪ್ರಚಾರಕರು [ಧಾರ್ಮಿಕ ಪುರುಷರ ಜೀವನ ಚರಿತ್ರೆ]	,,
ವಿಚಾರ ಧಾರೆ [ವಿಮರ್ಶಾ ಪ್ರಬಂಧಗಳು]	,,